# ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ
# ಬೆಂಗಳೂರು

**ಹೆಚ್.ಆರ್.ಸಿ.ಸಂಖ್ಯೆ: 754/10/31/2019(B–3)**

**ದಿನಾಂಕ: 24–08–2021**

**ಉಪಸ್ಥಿತರು: ಶ್ರೀ ಆರ್.ಕೆ.ದತ್ತ, ಮಾನ್ಯ ಸದಸ್ಯರು**

**ದೂರುದಾರರು:**

ಶ್ರೀ ಎಸ್.ಎನ್.ಪ್ರದೀಪ್,
ಬಿನ್ ಲೇಟ್ ಎಸ್.ಕೆ ನಾರಾಯಣರೆಡ್ಡಿ,
ಸಿಂಗನಾಯಕನಹಳ್ಳಿ ಗ್ರಾಮ ಹಾಗೂ ಪೋಸ್ಟ್,
ಯಲಹಂಕ ಹೋಬಳಿ,
ಬೆಂಗಳೂರು–560064.

## ಆದೇಶ

ದೂರುದಾರರಾದ ಶ್ರೀ ಪ್ರದೀಪ್ ರವರು ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗಕ್ಕೆ ದೂರು ಸಲ್ಲಿಸಿದ್ದು, ದಿನಾಂಕ.12.06.2017ರಂದು ಸಿಂಗನಾಯಕನಹಳ್ಳಿ ಗ್ರಾಮದ ವಾಸಿ ಈಶ್ವರ ಎಂಬುವವರ ಮಗಳಾದ ನವ್ಯಶ್ರೀ ರವರನ್ನು ವಿವಾಹವಾಗಿದ್ದು, ಅವರ ಸಂಸಾರದಲ್ಲಿ ವೈಮನಸ್ಸುಗಳುಂಟಾಗಿ ಇದರಿಂದ ದೂರುದಾರರ ಹೆಂಡತಿ ನವ್ಯಶ್ರೀ ತವರು ಮನೆ ಸೇರಿದ್ದು, ಹಲವು ಬಾರಿ ನ್ಯಾಯ ಪಂಚಾಯತಿ ಮಾಡಿದ್ದು, ಆಕೆಯೂ ಪುನಃ ದೂರುದಾರರ ಜೊತೆ ಇರಲು ಇಚ್ಛಿಸಿರುವುದಿಲ್ಲ. ನಂತರ ದೂರುದಾರರ ಹೆಂಡತಿ ಹಾಗೂ ಮಾವನವರು ರಾಜಾನುಕುಂಟೆ ಪೊಲೀಸ್ ಠಾಣೆಯಲ್ಲಿ ಯಾವುದೇ ಲಿಖಿತ ದೂರುನ್ನು ನೀಡದಿದ್ದರೂ, ದೂರುದಾರರ ಮಾವನವರ ಕುಮಕ್ಕಿನಿಂದ ಆಸ್ತಿಯ ವಿಷಯವಾಗಿ ದೂರುದಾರರನ್ನು ಹಾಗೂ ಅವರ ಕುಟುಂಬದವರನ್ನು ರಾಜಾನುಕುಂಟೆ ಪೊಲೀಸರು ಪದೇ ಪದೇ ರಾಜಾನುಕುಂಟೆ ಪೊಲೀಸ್ ಠಾಣೆಗೆ ಕರೆಯಿಸುವುದು ಹಾಗೂ ದೂರುದಾರರಿಗೆ ರೂ. 5 ಲಕ್ಷ ಕೊಡುವಂತೆ ಡಿಮ್ಯಾಂಡ್ ಮಾಡಿರುತ್ತಾರೆಂದು, ಇದಕ್ಕೆ ಸಂಬಂಧಿಸಿದಂತೆ ದಿನಾಂಕ.19.01.2019 ರಿಂದ 05.02.2019 ರವರೆಗೆ ಪಿ.ಎಸ್.ಐ ರವರು ಫೋನ್‌ನಲ್ಲಿ ಮಾತನಾಡಿರುವ ಬಗ್ಗೆ ರೆಕಾರ್ಡ್(ಸಿ.ಡಿ) ಅನ್ನು ಸಹ ಮಾಡಿದ್ದು, ದಿನಾಂಕ.06.02.2019ರಂದು ದೂರುದಾರರನ್ನು ಠಾಣೆಗೆ ಕರೆಯಿಸಿ ಅವರ ಮಾವ ಮತ್ತು ಹೆಂಡತಿ ನವ್ಯಶ್ರೀ ರವರ ಮುಂದೆ

ರಾಜಾನುಕುಂಟೆ ಪೊಲೀಸರು ದೂರುದಾರರಿಗೆ ಹೊಡೆದು ಅವಮಾನ ಮಾಡಿ ಮಾನಸಿಕವಾಗಿ ತೊಂದರೆ ನೀಡಿರುತ್ತಾರೆಂದು, ಕಾನೂನನ್ನು ಕಾಪಾಡಬೇಕಾದ ಅಧಿಕಾರಿಯವರು ತನ್ನ ಮಾವನವರಿಗೆ ಬೆಂಬಲ ನೀಡಿದ್ದು, ದೂರುದಾರರಿಗೆ ನ್ಯಾಯ ದೊರಕಿಸಿ ಕೊಡದೆ ಅನ್ಯಾಯ ಮಾಡಿರುತ್ತಾರೆಂದು ಆರೋಪ ಮಾಡಿದ್ದಾರೆ. ಆದುದರಿಂದ ಸಂಬಂಧಪಟ್ಟವರ ವಿರುದ್ಧ ವಿಚಾರಣೆ ನಡೆಸಿ ಸೂಕ್ತ ಕಾನೂನು ಕ್ರಮ ಜರುಗಿಸುವಂತೆ ಕೋರಿದ್ದಾರೆ.

ದೂರುರ್ಜಿಯನ್ನು ಪರಿಶೀಲಿಸಲಾಗಿ, ಅರ್ಜಿದಾರರ ಹೆಂಡತಿಯಾದ ಶ್ರೀಮತಿ ನವ್ಯಶ್ರೀರವರು ದಿನಾಂಕ.19.02.2019 ರಂದು ಠಾಣೆಗೆ ಹಾಜರಾಗಿ ಆಕೆಯ ಗಂಡ ಪ್ರದೀಪ್, ಅತ್ತೆ ನಾಗರತ್ನಮ್ಮ, ಗಂಡನ ಅಣ್ಣ ನಾಗಭೂಷಣ್, ಆತನ ಹೆಂಡತಿ ಭಾರತಿ ರವರು ನೀಡಿದ ಹಿಂಸೆ ಹಾಗೂ ವರದಕ್ಷಿಣೆ ಕಿರುಕುಳದ ಬಗ್ಗೆ ನೀಡಿದ ದೂರಿನ ಮೇರೆಗೆ ಅರ್ಜಿದಾರರಾದ ಪ್ರದೀಪ್, ನಾಗರತ್ನಮ್ಮ, ನಾಗಭೂಷಣ, ಭಾರತಿ ರವರ ಮೇಲೆ ರಾಜಾನುಕುಂಟೆ ಪೊಲೀಸ್ ಠಾಣೆಯಲ್ಲಿ ಮೊ.ಸಂ.20/2019 ಕಲಂ 498(ಎ) 3 & 4 ಡಿ.ಪಿ ಆಕ್ಟ್ 323, 504, 506 ಜೊತೆಗೆ 34 ಐಪಿಸಿ ರೀತ್ಯ ಪ್ರಕರಣ ದಾಖಲಾಗಿರುತ್ತದೆ. ಸದರಿ ಪ್ರಕರಣದಲ್ಲಿ ಈಗಾಗಲೇ ತನಿಖೆಯನ್ನು ಪೂರೈಸಿ ಆರೋಪಿಗಳಾದ ಪ್ರದೀಪ್, ನಾಗರತ್ನಮ್ಮ, ನಾಗಭೂಷಣ್, ಭಾರತಿ ರವರ ಮೇಲೆ ದೋಷಾರೋಪಣಾಪಟ್ಟಿಯನ್ನು ತಯಾರು ಮಾಡಿ ಮಾನ್ಯ 2ನೇ ಎಸಿಜೆಎಂ ನ್ಯಾಯಾಲಯ, ಬೆಂಗಳೂರು ರವರಿಗೆ ದೋಷಾರೋಪಣಾಪಟ್ಟಿಯನ್ನು ಸಲ್ಲಿಸಿದ್ದು, ಸಿ.ಸಿ ನಂ.8479/19 ಪಡೆದುಕೊಂಡಿರುತ್ತದೆ. ಅರ್ಜಿದಾರರು ಅರ್ಜಿಯಲ್ಲಿ ಹೇಳಿರುವಂತೆ ಅರ್ಜಿದಾರರನ್ನು ಠಾಣೆಗೆ ಕರೆಯಿಸಿ ಯಾವುದೇ ಮಾನಸಿಕ ಹಿಂಸೆಯನ್ನು ನೀಡಿರುವುದಿಲ್ಲ. ಅರ್ಜಿದಾರರ ಮೇಲೆ ಪ್ರಕರಣ ದಾಖಲಾಗಿರುವುದರಿಂದ, ಅರ್ಜಿದಾರರು ದುರುದ್ದೇಶದಿಂದ ಅರ್ಜಿಯನ್ನು ನೀಡಿರುತ್ತಾರೆ. ಆದುದರಿಂದ, ಸದರಿ ಅರ್ಜಿಯನ್ನು ಮುಕ್ತಾಯ ಮಾಡುವಂತೆ ಸಿ.ಪಿ.ಐ, ದೊಡ್ಡಬಳ್ಳಾಪುರ ವೃತ್ತ ಅವರು ಸಲ್ಲಿಸಿದ್ದ ವರದಿಯನ್ನು ಪೊಲೀಸ್ ಅಧೀಕ್ಷಕರು, ಬೆಂಗಳೂರು ಜಿಲ್ಲೆ, ಬೆಂಗಳೂರು ಅವರು ಅನುಮೋದಿಸಿ, ಆಯೋಗಕ್ಕೆ ಸಲ್ಲಿಸಿದ್ದಾರೆ.

ಸದರಿ ವರದಿಯ ಪ್ರತಿಯನ್ನು ದೂರುದಾರರಿಗೆ ಕಳುಹಿಸಿದ್ದು, ದೂರುದಾರರು ಕೆಳಕಂಡಂತೆ ಅಭಿಪ್ರಾಯ ಸಲ್ಲಿಸಿದ್ದಾರೆ:

> *"… I have been called upon to the police station by the aforesaid police officials, it is evident that I have been called upon to the police station by the aforesaid police officials, I have also enclosed the telephonic conversation dated 19/01/2019, 05/02/2019 and 06/02/219, the said phone conversation are not disputed by the police*

*officials, as on 08/11/2018 there was no police complaint filed by my wife or my father-in-law, when there was no complaints whatsoever against me or my family members, the aforesaid police have no business or official capacity to call me to the station……*

*….District Police Complaint Authority and the police Circle Inspector had not investigated or conducted the enquiry with regard to the allegations made in the complaint, no enquiry as contemplated under the Karnataka Police Act has been held by the District Police Complaint Authority…..*

*……..*

*Wherefore I respectfully pray your Hon'ble authority may be pleased to reject the report forwarded by the concerned police officials and respectfully prays your Hon'ble authority to conduct an independent enquiry towards the allegations made by me in the complaint and render justice….”*

ಪ್ರಕರಣಕ್ಕೆ ಸಂಬಂಧಿಸಿದಂತೆ ದೂರು, ಪೊಲೀಸ್ ಅಧೀಕ್ಷಕರು, ಬೆಂಗಳೂರು ಜಿಲ್ಲೆ ರವರು ಸಲ್ಲಿಸಿದ್ದ ವರದಿ ಹಾಗೂ ದೂರುದಾರರ ಅಭಿಪ್ರಾಯವನ್ನು ಪರಿಶೀಲಿಸಲಾಗಿ ಪ್ರಕರಣದಲ್ಲಿ ಮರು ವಿಚಾರಣೆ ಅಗತ್ಯವಿರುವುದರಿಂದ, ದೂರು, ವರದಿ ಮತ್ತು ದೂರುದಾರರ ಅಭಿಪ್ರಾಯದ ಪ್ರತಿಗಳನ್ನು ಆಯೋಗದ ಹೆಚ್ಚುವರಿ ಆರಕ್ಷಕ ಮಹಾನಿರ್ದೇಶಕರಿಗೆ ಕಳುಹಿಸಿ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ಸೂಚಿಸಿದ್ದು, ದಿನಾಂಕ.11.09.2020ರ ಪತ್ರದ ಅನ್ವಯ ಆಯೋಗದ ಎಡಿಜಿಪಿ ರವರು ಸಲ್ಲಿಸಿರುವ ವಿಚಾರಣಾ ವರದಿಯೊಂದಿಗೆ ಆಯೋಗದ Dy.S.P ರವರ ವರದಿಯನ್ನು ಹಾಗೂ ಸಂಬಂಧಪಟ್ಟ ದಾಖಲಾತಿಗಳನ್ನು ಸಹ ಸಲ್ಲಿಸಿರುತ್ತಾರೆ.

ಅರ್ಜಿದಾರರು ತಮ್ಮ ಅರ್ಜಿ ಮತ್ತು ಹೇಳಿಕೆಯಲ್ಲಿ ರಾಜಾನುಕುಂಟೆ ಪೊಲೀಸ್ ಠಾಣೆಯ ಪಿ.ಎಸ್.ಐ ರವರು ತಮ್ಮ ಮೇಲೆ ಯಾವುದೇ ಕೇಸುಗಳಿಲ್ಲದಿದ್ದರೂ ತಮ್ಮನ್ನು ಹಾಗೂ ಕುಟುಂಬದ ಸದಸ್ಯರನ್ನು ಪದೇ ಪದೇ ಠಾಣೆಗೆ ಕರೆಯಿಸಿ ಬೆಳಿಗ್ಗೆಯಿಂದ ಸಂಜೆವರೆಗೆ ಠಾಣೆಯಲ್ಲಿ ಕೂರಿಸುತ್ತಾರೆ ಹಾಗೂ ವಿಚಾರಣೆ ನೆಪದಲ್ಲಿ ದಿನಾಂಕ.19.01.2019 ರಿಂದ ದಿನಾಂಕ.05.02.2019 ರವರೆಗೆ ನನ್ನೊಂದಿಗೆ ಮಾತನಾಡಿ 5 ಲಕ್ಷ ರೂ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆಂದು, ದಿನಾಂಕ.06.02.2019 ರಂದು ತಮ್ಮ ಮಾವ ಈಶ್ವರಪ್ಪ ಮತ್ತು ಹೆಂಡತಿಯ ಮುಂದೆ ತನಗೆ ಅವಮಾನ ಮಾಡಿ ಹೊಡೆದು, ಅವಾಚ್ಯ

ಶಬ್ದಗಳಿಂದ ಬೈದು, ತಮ್ಮ ಮಾವ ಈಶ್ವರಪ್ಪ ಅವರಿಗೆ ಆಸ್ತಿಯ ಅಗ್ರಿಮೆಂಟ್ ಮಾಡಿಕೊಡಲು ತಿಳಿಸಿರುತ್ತಾರೆ. ಡಿವೈ.ಎಸ್.ಪಿ ರವರು ಸಹ ನನಗೆ ಅವಾಚ್ಯ ಶಬ್ದಗಳಿಂದ ಬೈದು, ಮಾನಸಿಕವಾಗಿ ತೊಂದರೆ ಕೊಟ್ಟಿರುತ್ತಾರೆ. ನಾನು ಈ ಬಗ್ಗೆ ಯಲಹಂಕದ ಸರ್ಕಾರಿ ಆಸ್ಪತ್ರೆಯಲ್ಲಿ ಹೊರ ರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ, ಚಿಕಿತ್ಸೆ ಪಡೆದ ಬಗ್ಗೆ ಎಂ.ಎಲ್.ಸಿ ಪ್ರತಿಯನ್ನು ವಿಚಾರಣೆಗೆ ಹಾಜರುಪಡಿಸಿರುತ್ತಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ.06.02.2019 ರಂದು ದೂರುದಾರರೊಂದಿಗೆ ರಾಜಾನುಕುಂಟೆ ಪೊಲೀಸ್ ಠಾಣೆಗೆ ಹೋಗಿದ್ದ ಅರ್ಜಿದಾರರ ಸಂಬಂಧಿಕರಾದ ಶ್ರೀನಿವಾಸರೆಡ್ಡಿರವರನ್ನು ಮತ್ತು ವಕೀಲರಾದ ಆನಂದ ಬಿ.ಜಿ ರವರನ್ನು ವಿಚಾರಣೆ ಮಾಡಲಾಗಿ ಶ್ರೀನಿವಾಸರೆಡ್ಡಿ ತಮ್ಮ ಹೇಳಿಕೆಯಲ್ಲಿ ಪಿ.ಎಸ್.ಐ ರವರು ಪ್ರದೀಪ್ ರವರ ಕಪಾಳಕ್ಕೆ ಹೊಡೆದು ನಂತರ ಕೋಲಿನಲ್ಲಿಯೂ ಹೊಡೆದಿರುತ್ತಾರೆಂದು ನುಡಿದಿದ್ದು, ವಕೀಲರಾದ ಶ್ರೀ ಆನಂದ ಜಿ.ಬಿ ರವರು ತಮ್ಮ ಹೇಳಿಕೆಯಲ್ಲಿ ಪೊಲೀಸರು ಅರ್ಜಿದಾರರಿಗೆ ನಿಂದಿಸಿರುವ ಬಗ್ಗೆಯಾಗಲೀ, ಹಲ್ಲೆ ಮಾಡಿರುವ ಬಗ್ಗೆಯಾಗಲೀ ನುಡಿದಿರುವುದಿಲ್ಲ. ಸಾಕ್ಷೀದಾರರಾದ ಶ್ರೀ ಶ್ರೀನಿವಾಸ ರೆಡ್ಡಿ ಹಾಗೂ ಆನಂದ ಜಿ.ಬಿ ರವರುಗಳು ಹೇಳಿಕೆಗಳಲ್ಲಿ ವ್ಯತ್ಯಾಸ ಇರುವುದು ಕಂಡು ಬಂದಿರುತ್ತದೆ.

ದೂರುದಾರರ ಆಪಾದನೆಗಳ ಬಗ್ಗೆ ರಾಜಾನುಕುಂಟೆ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಶ್ರೀ ಪ್ರದೀಪ್ ಪೂಜಾರಿ ರವರನ್ನು ವಿಚಾರ ಮಾಡಿ ಹೇಳಿಕೆ ಮತ್ತು ದಾಖಲಾತಿಗಳನ್ನು ಪಡೆದು ಪರಿಶೀಲಿಸಲಾಗಿ, ದಿನಾಂಕ.02.11.2018 ರಂದು ದೂರುದಾರರಾದ ಪ್ರದೀಪ್ ರವರು ತಮ್ಮ ಹೆಂಡತಿಯಿಂದ ಜೀವರಕ್ಷಣೆ ನೀಡಬೇಕೆಂದು ಹಾಗೂ ಶ್ರೀಮತಿ ನವ್ಯಶ್ರೀಯನ್ನು ಠಾಣೆಗೆ ಕರೆಯಿಸಿ ಬುದ್ದಿವಾದ ಹೇಳಬೇಕೆಂದು ಕೇಳಿಕೊಂಡ ಮೇರೆಗೆ ಶ್ರೀಮತಿ ನವ್ಯಶ್ರೀಯವರಿಗೆ ಠಾಣೆಗೆ ಹಾಜರಾಗುವಂತೆ ಫೋನ್ ಮಾಡಿ ತಿಳಿಸಿದ ನಂತರ(ದಿನಾಂಕ ನೆನಪಿರುವುದಿಲ್ಲ) ಶ್ರೀಮತಿ ನವ್ಯಶ್ರೀ ಹಾಗೂ ಅವರ ತಂದೆಯವರಾದ ಶ್ರೀ ಈಶ್ವರ್ ಮತ್ತು ಪ್ರದೀಪ್ ರವರುಗಳು ರಾಜಾನುಕುಂಟೆ ಪೊಲೀಸ್ ಠಾಣೆಗೆ ಹಾಜರಾಗಿ, ಪ್ರದೀಪ್ ರವರಿಂದ ನಮಗೆ ಹಾಗೂ ನನ್ನ ಮಗಳಿಗೆ ಮಾನಸಿಕವಾಗಿ ತುಂಬಾ ತೊಂದರೆ ಉಂಟಾಗುತ್ತಿದ್ದು, ಗಂಡನ ಕಿರುಕುಳ ತಾಳಲಾರದೇ ನಮ್ಮ ಮನೆಯಲ್ಲಿಯೇ ಇರುತ್ತಾರೆ ಈ ಸಮಸ್ಯೆ ಬಗೆಹರಿಸಬೇಕೆಂದು ಕೇಳಿಕೊಂಡಿರುತ್ತಾರೆ. ಆ ಸಮಯದಲ್ಲಿ ನಾನು ನಿಮ್ಮ ಕೌಟುಂಬಿಕ ಸಮಸ್ಯೆಗೆ ಸಂಬಂಧಿಸಿದಂತೆ ಮಹಿಳಾ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಲ್ಲಿ ಅವರು ಕೌನ್ಸಿಲಿಂಗ್ ನಡೆಸಿ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳುತ್ತಾರೆಂದು ತಿಳಿಸಿ, ಸೂಕ್ತ ತಿಳುವಳಿಕೆ ನೀಡಿ ಠಾಣೆಯಿಂದ ಕಳುಹಿಸಿರುತ್ತೇನೆ. ಈ ವಿಚಾರದಲ್ಲಿ ದೂರುದಾರರು ಮತ್ತು ಅವರ ಪತ್ನಿ ಹಲವಾರು ಬಾರಿ ಠಾಣೆಗೆ ಹಾಜರಾಗಿ ತಮ್ಮ ಕೌಟುಂಬಿಕ

ಸಮಸ್ಯೆಯನ್ನು ಬಗೆಹರಿಸುವಂತೆ ಮೌಖಿಕವಾಗಿ ಕೇಳಿಕೊಂಡಿದ್ದು, ನಾನು ಈ ವಿಚಾರದಲ್ಲಿ ದೂರು ನೀಡಲು ತಿಳಿಸಿದಾಗ ಸದರಿಯವರು ಯಾವುದೇ ಲಿಖಿತ ದೂರು ನೀಡಿರುವುದಿಲ್ಲ.

ದಿನಾಂಕ.06.02.2019 ರಂದು ದೂರುದಾರರು ರಾಜಾನುಕುಂಟೆ ಪೊಲೀಸ್ ಠಾಣೆಗೆ ಹಾಜರಾಗಿ ತನ್ನ ಹೆಂಡತಿಯಾದ ಶ್ರೀಮತಿ ನವ್ಯಶ್ರೀ ನನ್ನಿಂದ ಆಸ್ತಿ ಬೇಕೆಂದು ಹಿಂಸೆ ನೀಡುತ್ತಿರುವುದಾಗಿ ನಮಗೆ ತಿಳಿಸಿದ್ದು, ಆಗ ದೂರುದಾರರು ಮತ್ತು ಅವರ ಮಾವನಾದ ಶ್ರೀ ಈಶ್ವರ್‌ರವರನ್ನು ಸದರಿ ವಿಷಯವಾಗಿ ವಿಚಾರಣೆ ಮಾಡುತ್ತಿದ್ದಾಗ, ದೂರುದಾರರು ಏರುಧ್ವನಿಯಲ್ಲಿ ಮಾತನಾಡುತ್ತಿದ್ದರು, ಆ ಸಂದರ್ಭದಲ್ಲಿ ತಾಳ್ಮೆಯಿಂದ ವರ್ತಿಸುವಂತೆ ನಾವು ತಿಳಿಸಿರುತ್ತೇವೆ. ಆ ಸಮಯದಲ್ಲಿ ದೂರುದಾರರಾದ ಪ್ರದೀಪ್ ರವರು ಅವರ ಹೆಂಡತಿ ನವ್ಯಶ್ರೀರೊಂದಿಗೆ ಯಾವುದೇ ಮಾತುಕತೆ ಮಾಡಿಕೊಳ್ಳದೇ ನನಗೆ ಹೆಂಡತಿ ಬೇಡವೆಂದು ಠಾಣೆಯಿಂದ ತೆರಳಿರುತ್ತಾರೆ. ನಂತರ ದಿನಾಂಕ.19.02.2019 ರಂದು ಶ್ರೀ ಈಶ್ವರ್ ಹಾಗೂ ಅವರ ಮಗಳಾದ ನವ್ಯಶ್ರೀ ರವರು ಠಾಣೆಗೆ ಹಾಜರಾಗಿ ದೂರುದಾರರ ವಿರುದ್ಧ ನೀಡಿದ ಲಿಖಿತ ದೂರಿನನ್ವಯ ರಾಜಾನುಕುಂಟೆ ಪೊಲೀಸ್ ಠಾಣೆಯ ಠಾಣಾ ಉಸ್ತುವಾರಿಯಲ್ಲಿದ್ದ ಎ.ಎಸ್.ಐ ಸಿದ್ದರಾಮ್ ರವರು ದೂರನ್ನು ಪಡೆದು ಮೊಕದ್ದಮೆ ಸಂಖ್ಯೆ.20/2019 ಕಲಂ 498(ಎ), 3 & 4 ಡಿಪಿ ಆಕ್ಟ್ 323, 506 ಜೊತೆಗೆ 34 ಐಪಿಸಿ ರೀತ್ಯ ಪ್ರಕರಣವನ್ನು ದಾಖಲಿಸಿಕೊಂಡಿರುತ್ತಾರೆ. ಸದರಿ ಪ್ರಕರಣದಲ್ಲಿ ತನಿಖೆ ಕೈಗೊಂಡು, ತನಿಖೆ ಪೂರ್ಣಗೊಳಿಸಿ ಆರೋಪಿಗಳ ವಿರುದ್ಧ ದಿನಾಂಕ.10.05.2019 ರಂದು ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾಪಟ್ಟಿ ಸಲ್ಲಿಸಲಾಗಿರುತ್ತದೆ. ದೂರುದಾರರು ತಮ್ಮ ದೂರಿನಲ್ಲಿ ತಿಳಿಸಿರುವ ಆನಂದ ಜಿ.ಬಿ ರವರು ಪ್ರದೀಪ್ ರವರ ಕೌಟುಂಬಿಕ ಕಾನೂನು ಸಲಹೆಗಾರರಾಗಿದ್ದು(ವಕೀಲರು) ಪ್ರದೀಪ್ ರವರ ಜೊತೆ ಆಗಾಗ್ಗೆ ಠಾಣೆಗೆ ಬಂದು ಹೋಗುತ್ತಿದ್ದರು ಹಾಗೂ ಶ್ರೀನಿವಾಸರೆಡ್ಡಿ ಯಾರೆಂದು ನನಗೆ ಗೊತ್ತಿರುವುದಿಲ್ಲ. ಅರ್ಜಿದಾರರುಗಳೊಂದಿಗೆ ನಾನು ಸೌಜನ್ಯಯುತವಾಗಿ ವರ್ತಿಸಿರುತ್ತೇನೆಯೇ ವಿನ: ಯಾವುದೇ ರೀತಿಯ ದೈಹಿಕ ಹಲ್ಲೆ ನಡೆಸಿರುವುದಿಲ್ಲ. ಅವಾಚ್ಯವಾಗಿ ಬೈದಿರುವುದಿಲ್ಲ ಮತ್ತು ಯಾವುದೇ ರೀತಿಯ ಹಣ ನೀಡಬೇಕೆಂದು ಒತ್ತಾಯ ಮಾಡಿರುವುದಿಲ್ಲ. ದೂರುದಾರರಿಗೆ ತಿಳುವಳಿಕೆ ನೀಡಿದ್ದನ್ನು ತಪ್ಪಾಗಿ ತಿಳಿದು, ದುರುದ್ದೇಶದಿಂದ ನನ್ನ ಮೇಲೆ ಸುಳ್ಳು ಆಪಾದನೆ ಮಾಡಿರುತ್ತಾರೆಂದು ದೂರುದಾರರ ಆಪಾದನೆಗಳನ್ನು ನಿರಾಕರಿಸಿ ಹೇಳಿಕೆ ಮತ್ತು ದಾಖಲಾತಿಗಳನ್ನು ಹಾಜರುಪಡಿಸಿರುತ್ತಾರೆ ಹಾಗೂ ದೂರುದಾರರು ಹಾಜರುಪಡಿಸಿರುವ ಸಿ.ಡಿ ಯಲ್ಲಿನ ವಿಚಾರವನ್ನು ತಿಳಿದುಕೊಂಡಿದ್ದು, ಸದರಿ ಸಿ.ಡಿ ಯಲ್ಲಿರುವ ಧ್ವನಿಯು ನನ್ನದಾಗಿರುವುದಿಲ್ಲ ಎಂದು ತಮ್ಮ ಹೇಳಿಕೆಯಲ್ಲಿ ತಿಳಿಸಿರುವುದು ಕಂಡು ಬಂದಿರುತ್ತದೆ.

ಅರ್ಜಿದಾರರು ದಿನಾಂಕ.06.02.2019ರಂದು ಯಲಹಂಕ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದು, ಚಿಕಿತ್ಸಾ ಕಾಲದಲ್ಲಿ ಪೊಲೀಸರು ಹಲ್ಲೆ ಮಾಡಿರುತ್ತಾರೆಂದು ತಿಳಿಸಿದ್ದು, ಈ ಬಗ್ಗೆ ವೈದ್ಯರು

ಎಂ.ಎಲ್.ಸಿ ದಾಖಲಿಸಿದ್ದು, ಸದರಿ ಎಂ.ಎಲ್.ಸಿಗೆ ಸಂಬಂಧಿಸಿದಂತೆ ವೈದ್ಯರಿಂದ ಗಾಯದ ಪ್ರಮಾಣ ಪತ್ರ ಮತ್ತು ಅಭಿಪ್ರಾಯ ಪಡೆದು ಪರಿಶೀಲಿಸಲಾಗಿ, ದಿನಾಂಕ.06.02.2019 ರಂದು ರಾತ್ರಿ 11.45 ಗಂಟೆಗೆ ದೂರುದಾರರು ಯಲಹಂಕ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಾಗಿದ್ದು, ಚಿಕಿತ್ಸಾ ಕಾಲದಲ್ಲಿ ಪೊಲೀಸರಿಂದ ಹಲ್ಲೆಯಾಗಿರುತ್ತದೆಂದು ತಿಳಿಸಿದ ಮೇರೆಗೆ ವೈದ್ಯರು "Assault by Police Officer" 1) Tenderness on Face, 2) In duration on Face, forehead and cheek. It might be on head, i.e slap on face ಎಂದು ನಮೂದಿಸಿದ್ದು, ಈ ಬಗ್ಗೆ ವೈದ್ಯರು ತಮ್ಮ ಅಭಿಪ್ರಾಯದಲ್ಲಿ Above injury is simple in Nature ಎಂದು ನಮೂದಿಸಿವುದು ಕಂಡು ಬಂದಿರುತ್ತದೆ.

ದೂರುದಾರರಾದ ಶ್ರೀ ಪ್ರದೀಪ್ ಅವರ ಸಾಕ್ಷಿದಾರರಾದ ಶ್ರೀನಿವಾಸ ರೆಡ್ಡಿ ರವರ ಹೇಳಿಕೆ ಮತ್ತು ಗಾಯದ ಪ್ರಮಾಣ ಪತ್ರದಿಂದ ಪಿ.ಎಸ್.ಐ ರವರು ದೂರುದಾರರ ಕೆನ್ನೆಗೆ ಹೊಡೆದಿರುವುದು ಕಂಡು ಬಂದಿರುತ್ತದೆ. ಪಿ.ಎಸ್.ಐ ರವರು ಫೋನ್‌ನಲ್ಲಿ ಮಾತನಾಡಿದ್ದಾರೆಂದು ಆಯೋಗಕ್ಕೆ ಹಾಜರುಪಡಿಸಲಾದ ಸಿಡಿಯ ಸಂಭಾಷಣೆಯನ್ನು ಪರಿಶೀಲಿಸಲಾಗಿ ಪಿ.ಎಸ್.ಐ ರವರು ದೂರುದಾರರೊಂದಿಗೆ ಅವರ ಜಮೀನಿನ ವಿಚಾರ ಮಾತನಾಡಿರುವುದು ಕಂಡು ಬಂದಿರುತ್ತದೆ ಎಂಬ ಅಭಿಪ್ರಾಯ ವರದಿಯನ್ನು ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್, ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ, ಬೆಂಗಳೂರು ಅವರು ಸಲ್ಲಿಸಿದ್ದಾರೆ.

ದೂರುದಾರರಾದ ಶ್ರೀ ಪ್ರದೀಪ್ ಅವರ ಸಾಕ್ಷಿದಾರರಾದ ಶ್ರೀ ಶ್ರೀನಿವಾಸರೆಡ್ಡಿ ಅವರು ಆಯೋಗದ ಡಿವೈ.ಎಸ್.ಪಿ ಅವರ ಮುಂದೆ ಹೇಳಿಕೆ ನೀಡಿ ಪ್ರದೀಪ್‌ರವರ ಕೇಸಿನ ಬಗ್ಗೆ ಕೇಳಲಾಗಿ, ಪ್ರದೀಪ್ ಹಣವನ್ನು ನೀಡಿದರೆ ಕೇಸ್ ವಜಾಮಾಡುತ್ತೇವೆಂದು ಠಾಣಾ ಬರಹಗಾರರು ನನಗೆ ತಿಳಿಸುತ್ತಿದ್ದರು.ಪೊಲೀಸ್ ಇನ್ಸ್‌ಪೆಕ್ಟರ್ ಅವರು ಪ್ರದೀಪ್‌ರನ್ನು ವಿಚಾರಿಸುತ್ತಾ ನೀನು ಆಸ್ತಿಗೆ ಸಂಬಂಧಿಸಿದಂತೆ ಸೆಟಲ್‌ಮೆಂಟ್ ಮಾಡಿಕೊಳ್ಳದಿದ್ದರೆ ನಿನ್ನ ಮೇಲೆ ಇಲ್ಲಸಲ್ಲದ ಕೇಸ್ ಹಾಕುತ್ತೇವೆ. ಜೈಲಿಗೆ ಕಳುಹಿಸುತ್ತೇವೆಂದು ಅವಾಚ್ಯ ಶಬ್ದಗಳಿಂದ ಬೈದು, ಪ್ರದೀಪ್ ರವರಿಗೆ ಕಪಾಳಕ್ಕೆ ಹೊಡೆದು ನಂತರ ಕೋಲಿನಲ್ಲಿಯೂ ಹೊಡೆದಿರುತ್ತಾರೆಂದು ತಿಳಿಸಿರುತ್ತಾರೆ ಮತ್ತು ಈ ಬಗ್ಗೆ ತುರ್ತು ಚಿಕಿತ್ಸಾ ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ, ಯಲಹಂಕ, ಬೆಂಗಳೂರು ಅವರು ನೀಡಿರುವ ಗಾಯದ ಪ್ರಮಾಣಪತ್ರದಿಂದ ಶ್ರೀ ಪ್ರದೀಪ್ ಪೂಜಾರಿ PSI, ವಿಶ್ವನಾಥಪುರ ಪೊಲೀಸ್ ಠಾಣೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಅವರು ದೂರುದಾರರ ಕೆನ್ನೆಗೆ ಹೊಡೆದಿರುವುದು ಕಂಡು ಬಂದಿದ್ದು, ಅಧಿಕಾರ ದುರುಪಯೋಗ ಮಾಡಿರುವುದು, ಹಾಗೂ ಹಣ ನೀಡಿದರೆ ಕೇಸ್ ವಜಾ ಮಾಡುತ್ತೇವೆಂದು ಠಾಣಾ ಬರಹಗಾರರು ಹೇಳಿರುವುದರ ಬಗ್ಗೆ ಠಾಣಾ ಮುಖ್ಯಸ್ಥರಾದ ತಾವು ಠಾಣಾ ಬರಹಗಾರರನ್ನು

ವಿಚಾರಿಸದೇ ಕರ್ತವ್ಯ ಲೋಪ ಎಸಗಿರುವುದು ಮೇಲ್ಕಂಡ ಅಂಶಗಳಿಂದ ಕಂಡು ಬಂದಿರುವುದರಿಂದ, ಅಧಿಕಾರ ದುರುಪಯೋಗ ಹಾಗೂ ಕರ್ತವ್ಯ ಲೋಪ ಎಸಗಿರುವುದರಿಂದ ನಿಮ್ಮ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಶಿಫಾರಸ್ಸು ಮಾಡಬಾರದೇಕೆ ಎಂಬುದರ ಬಗ್ಗೆ ಹೇಳುವುದೇನಾದರೂ ಇದ್ದಲ್ಲಿ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಮುಂದೆ ಖುದ್ದು ಹಾಜರಾಗಿ ಲಿಖಿತ ಹೇಳಿಕೆ/ಸಮಜಾಯಿಷಿ ಸಲ್ಲಿಸುವಂತೆ PHR Act 1993 ಕಲಂ 16 ರ ಅಡಿ ನೋಟೀಸು ಜಾರಿ ಮಾಡಿದ್ದು, ದಿನಾಂಕ.20.10.2020 ರಂದು ದೂರುದಾರರಾದ ಶ್ರೀ ಎಸ್.ಎನ್ ಪ್ರದೀಪ್ ಹಾಗೂ ಪಿ.ಎಸ್.ಐ ಶ್ರೀ ಕೆ.ಪ್ರದೀಪ್ ಪೂಜಾರಿ ರವರು ಆಯೋಗದ ಮುಂದೆ ಹಾಜರಾಗಿದ್ದು, ದೂರುದಾರರಾದ ಶ್ರೀ ಎಸ್.ಎನ್ ಪ್ರದೀಪ್ ರವರು ಆಯೋಗದ ಮುಂದೆ ನೀಡಿರುವ ಹೇಳಿಕೆ ಕೆಳಕಂಡಂತೆ ಇದೆ:

> "....ದಿನಾಂಕ. 12.06.2017 ರಂದು ನನ್ನ ಸ್ವಂತ ಊರಿನವರೇ ಆದ ಶ್ರೀ ಈಶ್ವರ್ ರವರ ಮಗಳಾದ ನವ್ಯಶ್ರೀ ರವರನ್ನು ಮದುವೆಯಾಗಿರುತ್ತೇನೆ. ನಾನು ಮದುವೆಯಾದ 3 ತಿಂಗಳ ನಂತರ ನನ್ನ ಮತ್ತು ನವ್ಯಶ್ರೀ ನಡುವೆ ಸಂಸಾರದಲ್ಲಿ ಬಿರುಕು ಉಂಟಾಗಿರುತ್ತದೆ, ಕಾರಣ ನನ್ನ ತಾಯಿಯ ಹೆಸರಿನಲ್ಲಿರುವ ಆಸ್ತಿಯನ್ನು ನನ್ನ ಹೆಂಡತಿಯ ತಂದೆಯ ಹೆಸರಿಗೆ ಅಗ್ರಿಮೆಂಟ್ ಮಾಡಿಕೊಡು ಎಂದು ಹಲವಾರು ಬಾರಿ ಜಗಳವಾಗಿ ಈ ಬಗ್ಗೆ ನಮ್ಮ ಕುಟುಂಬಸ್ಥರು ಸೇರಿ ನ್ಯಾಯ ಪಂಚಾಯತಿ ಕೂಡ ಮಾಡಲಾಗಿರುತ್ತದೆ.
>
> ದಿನಾಂಕ. 02.11.2018 ರಂದು ಮಲಗಿದ್ದಾಗ ನನ್ನ ಹೆಂಡತಿ ನವ್ಯಶ್ರೀ ನನ್ನ ಕುತ್ತಿಗೆಗೆ ಕೈಯಿಂದ ಹಲ್ಲೆ ಮಾಡಿರುತ್ತಾಳೆ. ಅದೇ ದಿನ ನಾನು ಯಲಹಂಕ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದು ನಂತರ ನಾನು ರಾಜನಕುಂಟೆ ಪೊಲೀಸ್ ಠಾಣೆಗೆ ದೂರು ನೀಡಲು ಹೋದಾಗ ಪೊಲೀಸರು ನನ್ನಿಂದ ಯಾವುದೇ ದೂರು ಸ್ವೀಕರಿಸಿರುವುದಿಲ್ಲ. ದಿನಾಂಕ.08.11.2018 ರಂದು ರಾಜನಕುಂಟೆ ಪೊಲೀಸ್ ಠಾಣೆಯಿಂದ ಕರೆ ಮಾಡಿ ನನ್ನನ್ನು ಠಾಣೆಗೆ ಬರಲು ತಿಳಿಸಿದರು. ಆ ದಿನ ನಾನು ಮದ್ಯಾಹ್ನ 10.30 ಗಂಟೆಗೆ ಪೊಲೀಸ್ ಠಾಣೆಗೆ ಹೋಗಿ ಪಿ.ಎಸ್.ಐ ಪ್ರದೀಪ್ ಪೂಜಾರಿರವರನ್ನು ಭೇಟಿ ಮಾಡಲಾಗಿ ಅವರು ನನಗೆ ನೀನು ನಿನ್ನ ಆಸ್ತಿಯನ್ನು, ನನ್ನ ಮಾವನವರಾದ ಶ್ರೀ ಈಶ್ವರ್ ರವರಿಗೆ ಸೇಲ್ ಅಗ್ರಿಮೆಂಟ್ ಮಾಡಿಕೊಡು, ಇಲ್ಲದಿದ್ದರೆ ನಿನ್ನ ಮೇಲೆ ವರದಕ್ಷಿಣೆ ಕಿರುಕುಳದ ಕೇಸ್ ಹಾಗೂ ಬೇರೆ ಬೇರೆ ಕೇಸ್ ಹಾಕಿ ಜೈಲಿಗೆ ಕಳುಹಿಸುತ್ತೇನೆಂದು ಬೆದರಿಕೆ ಹಾಕಿದರು.
>
> ಇದೇ ವಿಚಾರವಾಗಿ ಪ್ರತಿ ದಿನ ನನ್ನ ಮನೆ ಹತ್ತಿರ ಒಬ್ಬ ಪೊಲೀಸ್ ಸಿಬ್ಬಂದಿಯನ್ನು ಕಳುಹಿಸಿ, ಠಾಣೆಗೆ ಬರುವಂತೆ ಒತ್ತಾಯಿಸಿ, ಠಾಣೆಗೆ ಕರೆಯಿಸಿ ಬೆಳಿಗ್ಗೆ ಯಿಂದ ಸಂಜೆಯವರೆಗೂ ಕೂರಿಸಿಕೊಳ್ಳುತ್ತಿದ್ದರು. ಹಾಗೂ ಪ್ರವೀಣ್ ಎಂಬ ವ್ಯಕ್ತಿ ನನಗೆ ಕರೆ ಮಾಡಿ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ರವರು ಹೇಳಿದ್ದಾರೆ ನೀನು 5 ಲಕ್ಷ ರೂಗಳನ್ನು ನೀಡಿದರೆ, ನಿನ್ನನ್ನು ಬಿಡುತ್ತಾರಂತೆ ಹಾಗೂ ಇನ್ನು ಮುಂದೆ ಯಾವುದೇ ಕೇಸ್ ಹಾಕುವುದಿಲ್ಲ ಎಂದು ತಿಳಿಸಿರುತ್ತಾರೆ, ಆದರೆ ಇದಕ್ಕೆ

ನಾನು ಒಪ್ಪಿರುವುದಿಲ್ಲ. ಹಾಗೂ ಇದೇ ವಿಷಯವಾಗಿ ಹಲವು ಬಾರಿ ನನ್ನ ತಾಯಿ, ನನ್ನ ಅಣ್ಣ ಮತ್ತು ಅತ್ತಿಗೆಯನ್ನು ಸಹ ಠಾಣೆಗೆ ಕರೆಯಿಸಿ ಬೆದರಿಕೆ ಹಾಕಿರುತ್ತಾರೆ.

ದಿನಾಂಕ.06.02.2019 ರಂದು ನನ್ನನ್ನು ಠಾಣೆಗೆ ಬರುವಂತೆ ಹರಿಪ್ರಸಾದ್ ಎಂಬ ಪೊಲೀಸ್ ಸಿಬ್ಬಂದಿ ಮೂಲಕ ಕರೆ ಮಾಡಿ ತಿಳಿಸಿದ್ದು, ನಾನು ಠಾಣೆಗೆ ಬೆಳಿಗ್ಗೆ 8.00 ಗಂಟೆಗೆ ಹೋಗಿರುತ್ತೇನೆ. ಆ ದಿನ ಸುಮಾರು 9.00 ಗಂಟೆಗೆ ಡಿವೈಎಸ್‌ಪಿ ಶ್ರೀ ಚಂದನ್ ರವರು ಠಾಣೆಗೆ ಬಂದರು, ನಂತರ ಬೆಳಿಗ್ಗೆ 10.30 ಗಂಟೆಗೆ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಶ್ರೀ ಪ್ರದೀಪ್ ಪೂಜಾರಿ ಯವರು ಠಾಣೆಗೆ ಬಂದರು. ಆ ನಂತರ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ರವರು ನನ್ನ ಮಾವನವರಾದ ಶ್ರೀ ಈಶ್ವರ್ ರವರನ್ನು ಠಾಣೆಗೆ ಕರೆಯಿಸಿ ಡಿವೈಎಸ್‌ಪಿ ರವರ ಮುಂದೆಯೇ ಅವಾಚ್ಯ ಶಬ್ದಗಳಿಂದ ಬೈದು, ನಿಂದಿಸಿ ನನಗೆ ಥಳಿಸಿರುತ್ತಾರೆ. ನಂತರ ನನ್ನನ್ನು ಡಿವೈಎಸ್‌ಪಿ ರವರು ಇದ್ದಂತಹ ಕೊಠಡಿಗೆ ನನ್ನನ್ನು ಅವರು ಕರೆದುಕೊಂಡು ಹೋಗಿದ್ದು ಅವರು ಸಹ ನನ್ನನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ, ಆಸ್ತಿಯ ಸೇಲ್ ಅಗ್ರಿಮೆಂಟ್ ಮಾಡಿಕೊಡು, ಇದಕ್ಕೆ ನೀನು ಒಪ್ಪದಿದ್ದರೆ ನಿನ್ನ ಮೇಲೆ ವರದಕ್ಷಿಣೆ ಕಿರುಕುಳದ ಕೇಸ್ ಮತ್ತು 420 ಕೇಸ್ ಹಾಕುತ್ತೇನೆಂದು ಬೆದರಿಕೆ ಹಾಕಿರುತ್ತಾರೆ. ನಂತರ ನಾನು ಯಲಹಂಕ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡು ಮನೆಗೆ ತೆರಳಿರುತ್ತೇನೆ. ನನ್ನ ಕುಟುಂಬಸ್ಥರನ್ನು ವಿಚಾರಣೆ ಮಾಡದೆಯೇ ಈ ಬಗ್ಗೆ ಠಾಣಾ ಮೊಕದ್ದಮೆ ಸಂಖ್ಯೆ. 20/2019 ಕಲಂ 498(ಎ), 3 & 4 ಡಿಪಿ ಆಕ್ಟ್, 323, 506 ಜೊತೆಗೆ 34 ಐಪಿಸಿ ರೀತ್ಯ ಪ್ರಕರಣವನ್ನು ದಾಖಲು ಮಾಡಿರುತ್ತಾರೆ.

ದಿನಾಂಕ.19.01.2019 ರಿಂದ ದಿನಾಂಕ.05.02.2019 ರವರೆಗೆ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಪ್ರದೀಪ್ ಪೂಜಾರಿ ಯವರು ನನ್ನ ಜೊತೆ ಆಸ್ತಿಯ ಬಗ್ಗೆ ಮಾತನಾಡಿರುವುದು, ಠಾಣೆಯಲ್ಲಿ ನನಗೆ ಹೊಡೆದಿರುವುದು, ಹಾಗೂ ಅವಾಚ್ಯ ಶಬ್ದಗಳಿಂದ ನಿಂದಿಸಿರುವ ಬಗ್ಗೆ ನಾನು ನನ್ನ ಮೊಬೈಲ್‌ನಿಂದ ರೆಕಾರ್ಡ್ ಮಾಡಿ ಸಿ.ಡಿ ತಯಾರು ಮಾಡಿ ದಿನಾಂಕ. 16.02.2019 ರಂದು ಮಾನವ ಹಕ್ಕುಗಳ ಆಯೋಗಕ್ಕೆ ಬಂದು ದೂರು ಕೊಟ್ಟಿದ್ದು, ಅದರ ಜೊತೆಗೆ ಸಿ.ಡಿ ಹಾಗೂ ಎಲ್ಲಾ ದಾಖಲೆಗಳನ್ನು ಸಹ ಕೊಟ್ಟಿರುತ್ತೇನೆ."

ದಿನಾಂಕ.01.12.2020 ರಂದು ದೂರುದಾರರಾದ ಶ್ರೀ ಎಸ್.ಎನ್ ಪ್ರದೀಪ್ ಹಾಗೂ ಪಿ.ಎಸ್.ಐ ಶ್ರೀ ಕೆ.ಪ್ರದೀಪ್ ಪೂಜಾರಿ ರವರುಗಳು ಆಯೋಗದ ಮುಂದೆ ಹಾಜರಾಗಿದ್ದು, ಪಿ.ಎಸ್.ಐ ಶ್ರೀ ಕೆ.ಪ್ರದೀಪ್ ಪೂಜಾರಿ ರವರು ಆಯೋಗದ ಮುಂದೆ ಹೇಳಿಕೆಯನ್ನು ನೀಡಿರುತ್ತಾರೆ, ಅವರ ಹೇಳಿಕೆಯು ಕೆಳಕಂಡಂತೆ ಇದೆ:

"ನಾನು ಸೆಪ್ಟೆಂಬರ್ 2018 ರಿಂದ ಸೆಪ್ಟೆಂಬರ್ 2019ವರೆಗೂ ರಾಜಾನುಕುಂಟೆ ಪೊಲೀಸ್ ಠಾಣೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ. 2018 ಅಕ್ಟೋಬರ್/ನವೆಂಬರ್ ತಿಂಗಳಿನಲ್ಲಿ ಶ್ರೀ ಈಶ್ವರ್ ರವರು ರಾಜಾನುಕುಂಟೆ ಪೊಲೀಸ್ ಠಾಣೆಗೆ ಬಂದು ತನ್ನ ಮಗಳು ಶ್ರೀಮತಿ ನವ್ಯಶ್ರೀ ಹಾಗೂ ಅಳಿಯ ಶ್ರೀ ಪ್ರದೀಪ್‌ರವರ ಮಧ್ಯೆ

ಗಂಡ ಹೆಂಡತಿ ಜಗಳ ನಡೆಯುತ್ತಿದ್ದು, ನನ್ನ ಅಳಿಯ ನನ್ನ ಮಗಳಿಗೆ ತೊಂದರೆ ಕೊಡುತ್ತಿರುವುದಾಗಿ ತಿಳಿಸಿ, ಈ ಸಮಸ್ಯೆ ಬಗೆಹರಿಸಬೇಕೆಂದು ಕೇಳಿಕೊಂಡಿರುತ್ತಾರೆ. ಅದಕ್ಕೆ ನಾನು ಈ ವಿಚಾರದ ಬಗ್ಗೆ ಠಾಣೆಯಲ್ಲಿ ದೂರು ದಾಖಲಿಸಬೇಕೆಂದು ಹೇಳಿರುತ್ತೇನೆ. ಅದಕ್ಕೆ ಶ್ರೀ ಈಶ್ವರ್ ರವರು ದೂರನ್ನು ದಾಖಲಿಸದೇ, ನನ್ನ ಅಳಿಯ ಶ್ರೀ ಪ್ರದೀಪ್ ರವರನ್ನೇ ಠಾಣೆಗೆ ಕರೆಸಿ ಈ ಸಮಸ್ಯೆಯನ್ನು ಬಗೆಹರಿಸಿಕೊಡಿ ಎಂದು ಕೇಳಿಕೊಂಡಿರುತ್ತಾರೆ. ಅದಕ್ಕೆ ನಾನು ನೀವು ದೂರು ನೀಡಿದ್ದಲ್ಲಿ ನಾವು ಠಾಣೆಗೆ ಕರೆಸುತ್ತೇವೆ ಇಲ್ಲದಿದ್ದಲ್ಲಿ ಕರೆಸಲು ಸಾಧ್ಯವಿಲ್ಲವೆಂದು ಹೇಳಿರುತ್ತೇನೆ.

ತದನಂತರ 2,3 ದಿನಗಳು ಬಿಟ್ಟು ಶ್ರೀ ಈಶ್ವರ್ ಹಾಗೂ ಅವರ ಮಗಳು ಶ್ರೀಮತಿ ನವ್ಯಶ್ರೀ ರವರುಗಳು ಪುನ: ಠಾಣೆಗೆ ಬಂದು ನನ್ನ ಅಳಿಯ ತೊಂದರೆ ಕೊಡುತ್ತಿದ್ದಾನೆ ಎಂದು ದೂರು ದಾಖಲಿಸದೇ ವಿಚಾರ ತಿಳಿಸುತ್ತಿದ್ದರು. ಹಾಗೂ ಶ್ರೀ ಈಶ್ವರ್ ರವರು ಆಸ್ತಿ ವಿಚಾರವಾಗಿ ಗಲಾಟೆ ನಡೆಯುತ್ತಿರುವ ವಿಷಯವನ್ನು ನನಗೆ ತಿಳಿಸಿದ್ದು, ಅದಕ್ಕೆ ನಾನು ಇದು ಸಿವಿಲ್ ವಿಚಾರಕ್ಕೆ ಸಂಬಂಧಪಟ್ಟಿದೆ ಎಂದು ಹೇಳಿರುತ್ತೇನೆ. ಅದಕ್ಕೆ ಶ್ರೀ ಈಶ್ವರ್ ಹಾಗೂ ಅವರ ಮಗಳು ದೂರು ಕೊಡದೇ ಠಾಣೆಯಲ್ಲೇ ಇದ್ದರು. ಪುನ: 2 ದಿನಗಳ ನಂತರ ಠಾಣೆಗೆ ಶ್ರೀ ಈಶ್ವರ್ ಬರುತ್ತಾರೆ. ಅದೇ ರೀತಿಯಾಗಿ ಶ್ರೀ ಪ್ರದೀಪ್ ಕೂಡ ಠಾಣೆಗೆ ಬಂದು, ಎಲ್ಲರೂ ಠಾಣೆಯ ಹೊರಗೆ ನಿಂತು ಜೋರಾಗಿ ಮಾತುಕತೆ ನಡೆಸುತ್ತಿದ್ದರು. ಆಗ ನಾನು ಠಾಣೆಯ ಒಳಗೆ ಬಂದು ನಿಮ್ಮ ಸಮಸ್ಯೆಯ ಬಗ್ಗೆ ದೂರನ್ನು ದಾಖಲಿಸಿ ಎಂದು ಹೇಳಿದರೂ ಸಹ ದೂರನ್ನು ದಾಖಲಿಸದೆ ಆಸ್ತಿಯ ವಿಚಾರವಾಗಿ ಜೋರಾಗಿ ಮಾತನಾಡುತ್ತಿದ್ದರು. ಅದಕ್ಕೆ ನಾನು ಜಮೀನಿನ ವಿಷಯ ನಮಗೆ ಸಂಬಂಧಿಸಿದ್ದಲ್ಲ. ನಿಮ್ಮ ಮಗಳ ಹಾಗೂ ಅಳಿಯನ ಜಗಳದ ವಿಷಯವೇನಾದರು ಇದ್ದರೆ ದೂರು ದಾಖಲಿಸಿ, ಆಗ ನಿಮ್ಮ ಅಳಿಯ ಶ್ರೀ ಪ್ರದೀಪ್ ನನ್ನು ಕರೆಯಿಸಿ ಕೌನ್ಸಿಲಿಂಗ್ ಕೊಡಬಹುದು ಎಂದು ತಿಳಿಸಿದೆ. ಆಗಲೂ ಶ್ರೀ ಈಶ್ವರ್ ರವರು ದೂರು ದಾಖಲಿಸಲಿಲ್ಲ.

2018 ನವೆಂಬರ್ ನಲ್ಲಿ ಪ್ರೋಬೇಷನರಿ Dy S.P ಆಗಿ ಶ್ರೀ ಚಂದನ್ ರವರು ರಾಜಾನುಕುಂಟೆ ಪೊಲೀಸ್ ಠಾಣೆಗೆ ಇನ್‌ಚಾರ್ಜ್ ಆಗಿ ನೇಮಕವಾಗಿ ಕರ್ತವ್ಯಕ್ಕೆ ಹಾಜರಿರುತ್ತಾರೆ. ಆಗಲೂ ಸಹ ಶ್ರೀ ಈಶ್ವರ್ ರವರು ಮತ್ತು ಅವರ ಮಗಳು ಶ್ರೀಮತಿ ನವ್ಯಶ್ರೀ ರವರುಗಳು ಬಂದು Dy S.P ರವರ ಮುಂದೆ ತಮ್ಮ ಹಣ ಕಾಸಿನ ವಿಚಾರವನ್ನು ತಿಳಿಸಿರುತ್ತಾರೆ. ಆಗ ನಾನು ಅಲ್ಲೆ Dy S.P ಶ್ರೀ ಚಂದನ್ ರವರ ಪಕ್ಕದಲ್ಲೇ ಕುಳಿತ್ತಿದ್ದೆ. ಅದಕ್ಕೆ ನಾನು ಶ್ರೀ ಈಶ್ವರ್ ರವರಿಗೆ ಇದು ಸಿವಿಲ್ ವಿಚಾರಕ್ಕೆ ಸಂಬಂಧಪಟ್ಟಿರುವುದರಿಂದ ನೀವು ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳುವಂತೆ ಅವರಿಗೆ ತಿಳಿಸಿದ್ದು, ಅವರ ಬಳಿ ಹಣವನ್ನು ಕೇಳಿರುವುದಿಲ್ಲ ಹಾಗೂ ಅವಾಚ್ಯ ಶಬ್ದದಿಂದ ಬೈದಿರುವುದಿಲ್ಲ ಮತ್ತು ಗಂಡ ಹೆಂಡತಿ ಜಗಳದ ಬಗ್ಗೆ ಠಾಣಾ ಮೊಕದ್ದಮೆ ಸಂಖ್ಯೆ.20/2019 ಕಲಂ 498(ಎ), 3 & 4 ಡಿಪಿ ಆಕ್ಟ್, 323, 506 ಜೊತೆಗೆ 34 ಐಪಿಸಿ ರೀತ್ಯ ಎ.ಎಸ್.ಐ ಶ್ರೀ ಸಿದ್ದರಾಮ್ ರವರು ದಾಖಲಿಸಿರುತ್ತಾರೆ. ಆ ಸಮಯದಲ್ಲಿ ನಾನು ಠಾಣೆಯಲ್ಲಿ

ಇರುವುದಿಲ್ಲ, ಏಕೆಂದರೆ ಶ್ರೀ ಚಂದನ್ Dy S.P ರವರು ಕರ್ತವ್ಯದಲ್ಲಿದ್ದರು. ನಂತರ ಪ್ರಕರಣ ದಾಖಲಾಗಿರುವುದು ನನಗೆ ತಿಳಿದು ಬಂತು.

CROSS EXAMINATION:

ಶ್ರೀ ಪ್ರದೀಪ್ ರವರು ಪ್ರಶ್ನಿಸಿ, ನಾನು ದಿನಾಂಕ.16.02.2019 ರಂದು ರಾಜ್ಯ ಮಾನವ ಹಕ್ಕುಗಳ ಆಯೋಗ, ಬೆಂಗಳೂರು ಇಲ್ಲಿ ಬಂದು ದೂರು ದಾಖಲಿಸಿದ ಮೇಲೆ ರಾಜಾನುಕುಂಟೆ ಪೊಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ.20/2019ನ್ನು ದಾಖಲಿಸಿರುತ್ತಾರೆ. ಇದಕ್ಕಿಂತ ಮುಂಚೆ ನನ್ನ ವಿರುದ್ಧ 498(ಎ) ಆಗಲೀ ಇನ್ನಿತರೆ ದೂರುಗಳು ದಾಖಲಾಗಿರುವುದಿಲ್ಲ.

ಶ್ರೀ ಪ್ರದೀಪ್ ರವರು ಪಿ.ಎಸ್.ಐ ಶ್ರೀ ಪ್ರದೀಪ್ ಪೂಜಾರಿ ಅವರಿಗೆ ಪದೇ ಪದೇ ಠಾಣೆಗೆ ಕರೆಸಿ, ಅಲ್ಲೆ ಕೂರಿಸಿಕೊಳ್ಳುತ್ತಿದ್ದರು ಎಂದು ಪ್ರಶ್ನಿಸಿದ್ದು, ಅದಕ್ಕೆ ಪ್ರತಿ ಉತ್ತರವಾಗಿ ಪಿ.ಎಸ್.ಐ ಶ್ರೀ ಪ್ರದೀಪ್ ಪೂಜಾರಿಯವರು ನಾನು ಕರೆಸುತ್ತಿರಲಿಲ್ಲ. ಅವರೇ ಖುದ್ದಾಗಿ ಠಾಣೆಗೆ ಬರುತ್ತಿದ್ದರು ಎಂದು ಉತ್ತರಿಸಿದರು.

ಶ್ರೀ ಪ್ರದೀಪ್ ರವರು ಪಿ.ಎಸ್.ಐ ಶ್ರೀ ಪ್ರದೀಪ್ ಪೂಜಾರಿ ಅವರಿಗೆ ಇದು ಆಸ್ತಿ ಹಾಗೂ ಹಣಕಾಸಿನ ವಿಚಾರ, ನೀನು 5 ಲಕ್ಷ ಹಣ ಕೊಡು ಬಗೆಹರಿಸಿಕೊಡುತ್ತೇನೆ ಎಂದು ಕೇಳಿದ್ದೀರಿ ಎನ್ನುವ ಪ್ರಶ್ನೆಗೆ ಪ್ರತಿ ಉತ್ತರವಾಗಿ ಪಿ.ಎಸ್.ಐ ಶ್ರೀ ಪ್ರದೀಪ್ ಪೂಜಾರಿಯರವರು ನಾನು ಹಣ ಕೇಳಿರುವುದಿಲ್ಲ. ಇದು ಸಿವಿಲ್ ವಿಷಯಕ್ಕೆ ಸಂಬಂಧಿಸಿದ್ದು, ಕೋರ್ಟ್‌ನಲ್ಲಿ ಬಗೆಹರಿಸಿಕೊಳ್ಳಿ ಎಂದು ಹೇಳಿದ್ದೇನೆ ಎಂದು ಉತ್ತರಿಸಿದರು.

ಶ್ರೀ ಪ್ರದೀಪ್ ರವರು ಪಿ.ಎಸ್.ಐ ಶ್ರೀ ಪ್ರದೀಪ್ ಪೂಜಾರಿ ಅವರಿಗೆ ಸಿ.ಡಿ ಯಲ್ಲಿ ರೆಕಾರ್ಡ್ ಆಗಿರುವ ಸಂಭಾಷಣೆಯು ಆಸ್ತಿ ಹಾಗೂ ಹಣಕಾಸಿನ ವಿಚಾರವಾಗಿರುತ್ತದೆ ಎನ್ನುವ ಪ್ರಶ್ನೆಗೆ ಶ್ರೀ ಪ್ರದೀಪ್ ಪೂಜಾರಿ ಯವರು ನಾನು ಈ ವಿಷಯವನ್ನು Dy S.P ರವರಿಗೆ ಹೇಳುತ್ತಾ ಇದ್ದೆ ಎಂದು ಉತ್ತರಿಸಿದರು."

ಮುಂದುವರೆದು, ದೂರುದಾರರು ನೀಡಿದ್ದ ಸಿ.ಡಿಯಲ್ಲಿರುವ ಸಂಭಾಷಣೆಯನ್ನು ಬೆರಳಚ್ಚು ಮಾಡಿರುವ ದಾಖಲೆಯನ್ನು ನೋಡಲಾಗಿ, ರಾಜಾನುಕುಂಟೆ ಪೊಲೀಸ್ ಠಾಣೆಯ ಪ್ರೋಬೇಷನರಿ ಡಿವೈ.ಎಸ್.ಪಿ ಆಗಿದ್ದ ಶ್ರೀ ಚಂದನ್ ಕುಮಾರ್ ರವರು ಇದು ಸಿವಿಲ್ ವ್ಯಾಜ್ಯದ ಇತ್ಯರ್ಥದಲ್ಲಿ ಸಕ್ರಿಯವಾಗಿ ಭಾಗವಹಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದು, ಈ ವಿಚಾರವಾಗಿ ಸ್ಪಷ್ಟನೆ ನೀಡುವುದಕ್ಕೆ ಶ್ರೀ ಚಂದನ್ ಕುಮಾರ್ ಡಿವೈ ಎಸ್.ಪಿರವರಿಗೆ ನೋಟೀಸ್ ಜಾರಿ ಮಾಡಲಾಗಿರುತ್ತದೆ.

ದಿನಾಂಕ.08.02.2021 ರಂದು ಶ್ರೀ ಚಂದನ್ ಕುಮಾರ್ ಡಿವೈ ಎಸ್.ಪಿ, ತಿಪಟೂರು ಉಪ ವಿಭಾಗ, ಪಿ.ಎಸ್.ಐ ಶ್ರೀ ಕೆ. ಪ್ರದೀಪ್ ಪೂಜಾರಿ ಹಾಗೂ ದೂರುದಾರರಾದ ಶ್ರೀ ಎಸ್.ಎನ್ ಪ್ರದೀಪ್

ಯವರು ಆಯೋಗದ ಮುಂದೆ ಹಾಜರಾಗಿದ್ದು, ಶ್ರೀ ಚಂದನ್ ಕುಮಾರ್ ಡಿವೈ ಎಸ್.ಪಿ ರವರು ಅವರ ಹೇಳಿಕೆಯನ್ನು ಆಯೋಗದ ಮುಂದೆ ಈ ಕೆಳಕಂಡಂತೆ ನೀಡಿರುತ್ತಾರೆ:

> "ನಾನು ದಿನಾಂಕ.05.02.2019ರಲ್ಲಿ ಪ್ರೊಬೇಷನರಿ Dy S.P ಆಗಿ ರಾಜಾನುಕುಂಟೆ ಪೊಲೀಸ್ ಠಾಣೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ಟ್ರೈನಿಂಗ್‌ಗೋಸ್ಕರ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.
>
> ದಿನಾಂಕ.06.02.2019 ರಂದು ಬೆಳಿಗ್ಗೆ ನಾನು ಠಾಣೆಯಲ್ಲಿ ಕರ್ತವ್ಯಕ್ಕೆ ಹಾಜರಾಗಿದ್ದಾಗ ಶ್ರೀ ಈಶ್ವರ್ ಮತ್ತು ತಮ್ಮ ಮಗಳು ಶ್ರೀಮತಿ ನವ್ಯಶ್ರೀ ರವರೊಂದಿಗೆ ರಾಜಾನುಕುಂಟೆ ಪೊಲೀಸ್ ಠಾಣೆಗೆ ಬಂದು ತನ್ನ ಅಳಿಯ ಶ್ರೀ ಪ್ರದೀಪ್ ರವರು ತಮ್ಮ ಮಗಳು ನವ್ಯಶ್ರೀಗೆ ಕೊಟ್ಟಿರುವ ಮಾನಸಿಕ ಹಾಗೂ ದೈಹಿಕ ಹಿಂಸೆಗಳು ಮತ್ತು ವರದಕ್ಷಿಣೆ ಕಿರುಕುಳದ ಬಗ್ಗೆ ಹಾಗೂ ಅವರು ಮತ್ತು ಅವರ ಮಗಳಿಗೆ ಆಗಿರುವ ಹಣದ ವ್ಯವಹಾರದ ಮೋಸಗಳ ಬಗ್ಗೆ ಅವರು ಹೇಳಿಕೊಂಡಿರುತ್ತಾರೆ. ಹಾಗೂ ಅವರ ಮಗಳು ಶ್ರೀಮತಿ ನವ್ಯಶ್ರೀರವರಿಗೆ ಗಂಡ ಶ್ರೀ ಪ್ರದೀಪ್ ರವರಿಂದ ಸಹಿಸಲಾರದಂತ ಹಿಂಸೆ ಹಾಗೂ ನೋವುಗಳನ್ನು ಕೊಟ್ಟಿರುವ ಬಗ್ಗೆಯೂ ಸಹ ಹೇಳಿಕೊಂಡಿರುತ್ತಾರೆ.
>
> ಆನಂತರ ಈ ವಿಚಾರವಾಗಿ ಶ್ರೀ ಪ್ರದೀಪ್ ರವರನ್ನು ಠಾಣೆಗೆ ಕರೆಸಿ, ಪಿ.ಎಸ್.ಐ ಶ್ರೀ ಪ್ರದೀಪ್ ಪೂಜಾರಿ ರವರು ಛೇಂಬರ್‌ಗೆ ಕರೆದುಕೊಂಡು ಬಂದಾಗ ಶ್ರೀ ಪ್ರದೀಪ್ ರವರ ಮಾವ ಶ್ರೀ ಈಶ್ವರ್ ಮತ್ತು ಶ್ರೀ ಪ್ರದೀಪ್ ರವರ ಹೆಂಡತಿಯಾದ ಶ್ರೀಮತಿ ನವ್ಯಶ್ರೀ ರವರು ಹೇಳಿರುವ ಆರೋಪಗಳ ಬಗ್ಗೆ ಶ್ರೀ ಪ್ರದೀಪ್ ರವರನ್ನು ವಿಚಾರಿಸಲಾಗಿ, ಶ್ರೀ ಪ್ರದೀಪ್ ರವರು ಅವರ ಆರೋಪಗಳನ್ನು ನಿರಾಕರಿಸಿ, ಅವರದೇ ಆದ ವಿಚಾರಗಳನ್ನು ಮಂಡಿಸಿರುತ್ತಾರೆ.
>
> ಈ ವಿಚಾರದ ಬಗ್ಗೆ ನಾನು ಅವರಿಗೆ ನೀವು ಮಾಡಿರುವುದು ತಪ್ಪು, ನಿಮ್ಮ ಗಂಡ ಹೆಂಡತಿ ಮದ್ಯದಲ್ಲಿ ಮತ್ತು ಮಾವನೊಡನೆ ತೊಂದರೆ ಇದ್ದರೆ ಅದನ್ನು ನೀವೇ ಬಗೆಹರಿಸಿಕೊಳ್ಳಬಹುದಾಗಿದೆ. ಇಲ್ಲವಾದಲ್ಲಿ ಅವರ ದೂರನ್ನು ಲಿಖಿತ ರೂಪದಲ್ಲಿ ನೀಡಿದರೆ ಕಾನೂನು ರೀತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಬುದ್ದಿ ಮಾತನ್ನು ಹೇಳಿರುತ್ತೇನೆ.
>
> ಈದಾದ ನಂತರ ಶ್ರೀ ಈಶ್ವರ್ ಮತ್ತು ಅವರ ಮಗಳು ಶ್ರೀಮತಿ ನವ್ಯಶ್ರೀ ಬಗ್ಗೆ ಅವರ ಅಳಿಯ ಮತ್ತೆ ಮತ್ತೆ ತೊಂದರೆ ಕೊಡುತ್ತಿರುತ್ತಾರೆ. ನೀವು ಬುದ್ದಿ ಹೇಳಿ ಕಳುಹಿಸಿದರೂ ಸಹ ಅವರು ಅದೇ ವಿಧಾನವನ್ನು ಮುಂದುವರೆಸುತ್ತಾರೆ ಎಂದು ಲಿಖಿತ ಹೇಳಿಕೆಯಲ್ಲಿ ಕಂಪ್ಲೈಂಟ್ ನೀಡಿರುತ್ತಾರೆ. ಇದರ ವಿಚಾರವಾಗಿ ಠಾಣಾ ಮೊಕದ್ದಮೆ ಸಂಖ್ಯೆ.20/2019 ಕಲಂ 498(ಎ), 3 & 4 ಡಿಪಿ ಆಕ್ಟ್, 323, 504, 506 ರೆ/ವಿ 34 ಐಪಿಸಿ ರೀತ್ಯ ಪ್ರಕರಣ ದಾಖಲಿಸಿರುತ್ತೇನೆ. ಇದರ ಬಗ್ಗೆ ಶ್ರೀ ಪ್ರದೀಪ್ ರವರ ಮಾವ ಶ್ರೀ ಈಶ್ವರ್ ಮತ್ತು ಶ್ರೀಮತಿ ನವ್ಯಶ್ರೀ ರವರ ಹೇಳಿಕೆ ಪಡೆದಲ್ಲಿ ನಿಜಾಂಶ ತಿಳಿದು ಬರುತ್ತದೆ, ಇದು ನನ್ನ ಹೇಳಿಕೆ ಆಗಿರುತ್ತದೆ.

CROSS EXAMINATION:

ನಾನು ಅವರಿಗೆ ನಿಮ್ಮ ಈ ಸಮಸ್ಯೆಯನ್ನು ಕೋರ್ಟ್‌ನಲ್ಲಿ ಬಗೆಹರಿಸಿಕೊಳ್ಳಿ ಎಂದು ಹೇಳಿರುವುದು ನಿಜ. ನಾನು ಎಮೋಷನಲ್ ಆಗಿ ಶ್ರೀ ಪ್ರದೀಪ್ ರವರಿಗೆ ನೀವು ಈ ರೀತಿ ಮಾಡೋದು ಸರಿಯಲ್ಲ ಎಂದು ಹೇಳಿದೆ. ಹಾಗೂ ಅವರು ರಿಟೆನ್ ಕಂಪ್ಲೈಂಟ್ ಕೊಟ್ಟರೆ ಎಫ್.ಐ.ಆರ್ ಆಗುತ್ತೆ ಎಂದು ಹೇಳಿದೆ.

ಪ್ರಾಪರ್ಟಿ ವಿಷಯದ ಬಗ್ಗೆ, ನಾನು ಇದು ಸಿವಿಲ್ ವಿಷಯವಾಗಿರುವುದರಿಂದ ಇದನ್ನು ಕೋರ್ಟ್‌ನಲ್ಲಿ ಬಗೆಹರಿಸಿಕೊಳ್ಳಿ, ಇಲ್ಲವಾದಲ್ಲಿ ನೀವೇ ಬಗೆಹರಿಸಿಕೊಳ್ಳಿ ಎಂದು ಹೇಳಿರುತ್ತೇನೆ."

ಮುಂದುವರೆದು, ದೂರುದಾರರ ಪತ್ನಿ ಶ್ರೀಮತಿ ನವ್ಯಶ್ರೀರವರು ದೂರುದಾರರ ಮೇಲೆ ಹಲ್ಲೆ ಮಾಡಿದ ಬಗ್ಗೆ ದೂರು ನೀಡಲು ರಾಜಾನುಕುಂಟೆ ಪೊಲೀಸ್ ಠಾಣೆಗೆ ಹೋಗಿದ್ದು, ಸಬ್‌ಇನ್ಸ್‌ಪೆಕ್ಟರ್ ಆಫ್ ಪೊಲೀಸ್ ರವರು ದೂರನ್ನು ದಾಖಲಿಸಲು ನಿರಕರಿಸಿರುತ್ತಾರೆಂದು, ದಿನಾಂಕ.20.10.2020 ರಂದು ಆಯೋಗದ ಮುಂದೆ ಹೇಳಿಕೆ ನೀಡಿರುತ್ತಾರೆ. ಯಲಹಂಕದ ಸರ್ಕಾರಿ ಆಸ್ಪತ್ರೆಯಲ್ಲಿ ತನ್ನನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಯಿತು ಮತ್ತು ದಿನಾಂಕ.02.11.2018 ರಂದು ಒಂದು ಎಂಎಲ್‌ಸಿ ನೀಡಲಾಗಿದೆ ಎಂದು ದೂರುದಾರರು ಇಂದು ಸ್ಪಷ್ಟಪಡಿಸಿದರು. ಆದರೆ ಪಿ.ಎಸ್.ಐ ಶ್ರೀ ಕೆ. ಪ್ರದೀಪ್ ಪೂಜಾರಿ ರವರು ಎಂಎಲ್‌ಸಿಯನ್ನು ರಾಜಾನುಕುಂಟೆ ಪೊಲೀಸ್ ಠಾಣೆಯವರು ಸ್ವೀಕರಿಸಿರುವುದಿಲ್ಲ ಎಂದು ಹೇಳಿರುತ್ತಾರೆ. ಆದ್ದರಿಂದ, ಈ ಎಂ.ಎಲ್.ಸಿ ರಾಜಾನುಕುಂಟೆ ಪೊಲೀಸ್ ಠಾಣೆಗೆ ಏಕೆ ತಲುಪಿಲ್ಲವೆಂದು ಪರಿಶೀಲಿಸಿ ವರದಿ ಸಲ್ಲಿಸುವಂತೆ, ಹಾಗೂ ದೂರುದಾರರ ಮೇಲೆ ಪೊಲೀಸರು ಹಲ್ಲೆ ಮಾಡಿರುವ ಬಗ್ಗೆ ಯಲಹಂಕ ಸರ್ಕಾರಿ ಆಸ್ಪತ್ರೆಯ ದಿನಾಂಕ.06.02.2019ರ ಇನ್ನೊಂದು ಎಂ.ಎಲ್.ಸಿ ಇದ್ದು, ಇದು ರಾಜಾನುಕುಂಟೆ ಪೊಲಿಸ್ ಠಾಣೆಯಲ್ಲಿ ತಲುಪಿದೆಯೇ ಎಂಬ ಬಗ್ಗೆ ಡಿವೈ ಎಸ್.ಪಿ ಶ್ರೀ ಕೇಶವ್ ರವರು ಪರಿಶೀಲಿಸಿ ವರದಿಯನ್ನು ಸಲ್ಲಿಸುವಂತೆ ಸೂಚಿಸಿದ್ದು, ದಿನಾಂಕ 22.03.2021 ರಂದು, ದಿನಾಂಕ.06.03.2021ರ ಪತ್ರದ ಅನ್ವಯ ವರದಿಯನ್ನು ಸಲ್ಲಿಸಿದ್ದು, ವರದಿಯು ಕೆಳಕಂಡಂತೆ ಇದೆ:

"ಆಯೋಗದ ಆದೇಶದಂತೆ ದಿನಾಂಕ.02.11.2018 ರಂದು ದೂರುದಾರರಿಗೆ ಆದ ಗಾಯಗಳ ಬಗ್ಗೆ ಯಲಹಂಕ ಜನರಲ್ ಆಸ್ಪತ್ರೆ, ಆಡಳಿತಾಧಿಕಾರಿಗಳಿಗೆ ವರದಿ ಕೇಳಲಾಗಿ, ಅವರು ದೂರುದಾರರಾದ ಪ್ರದೀಪ್ ರವರು ದಿನಾಂಕ.02.11.2018 ರಂದು ನಮ್ಮ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ. ಚಿಕಿತ್ಸಾ ಕಾಲದಲ್ಲಿ Assaulted by wife ಎಂದು ತಿಳಿಸಿರುತ್ತಾರೆ". ಇದಕ್ಕೆ ಸಂಬಂಧಿಸಿದಂತೆ ಎಂ.ಎಲ್.ಸಿ ದಾಖಲಿಸಿ, ಎಂ.ಎಲ್.ಸಿ ಯನ್ನು ದೂರುದಾರರಾದ ಪ್ರದೀಪ್‌ರೊಂದಿಗೆ ಪೊಲೀಸ್ ಠಾಣೆಗೆ ಕಳುಹಿಸಲಾಗಿರುತ್ತದೆ. ಗಾಯಾಳುವಿನ ಪ್ರಮಾಣ ಪತ್ರವನ್ನು ಅವರಿಗೆ ನೀಡಲಾಗಿರುತ್ತದೆ. ದೂರುದಾರರಿಗೆ ಆದ ಗಾಯವು ಕೈಯಿಂದ ಹೊಡೆದಾಗ/ಉಗುರಿನಿಂದ ಆಗುವ ಸಾಧ್ಯತೆ ಇರುತ್ತದೆ.

ಹಾಗೂ ಗಾಯವು ಒಂದು ಅಥವಾ ಎರಡು ದಿನಗಳ ಹಿಂದೆ ಆಗಿರಬಹುದು ಎಂದು ವರದಿ ನೀಡಿರುತ್ತಾರೆ.

ದಿನಾಂಕ.06.02.2019 ರಂದು ದೂರುದಾರರು ಯಲಹಂಕ ಜನರಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ಎಂ.ಎಲ್.ಸಿ ಯು ದಾಖಲಾಗಿದ್ದು, ಇದಕ್ಕೆ ಸಂಬಂಧಿಸಿದ ಎಂ.ಎಲ್.ಸಿ ಯನ್ನು ಹಾಗೂ ಗಾಯದ ಪ್ರಮಾಣ ಪತ್ರವನ್ನು ದೂರುದಾರರಿಗೆ ನೀಡಲಾಗಿರುತ್ತದೆ ಎಂದು ವರದಿ ನೀಡಿರುತ್ತಾರೆ. ಇದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಈ ವರದಿಯೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಆಯೋಗಕ್ಕೆ ಸಲ್ಲಿಸಿದೆ."

ದಿನಾಂಕ.21.04.2021 ರಂದು ಪಿ.ಎಸ್.ಐ ಶ್ರೀ ಕೆ. ಪ್ರದೀಪ್ ಪೂಜಾರಿ, ದೂರುದಾರರಾದ ಶ್ರೀ ಎಸ್.ಎನ್ ಪ್ರದೀಪ್, ಅವರ ಪತ್ನಿ ಶ್ರೀಮತಿ ನವ್ಯಶ್ರೀ ಹಾಗೂ ಅವರ ಮಾವ ಶ್ರೀ ಈಶ್ವರ್ ರವರು ಆಯೋಗದ ಮುಂದೆ ಹಾಜರಾಗಿದ್ದು, ಶ್ರೀಮತಿ ನವ್ಯಶ್ರೀ ಹಾಗೂ ಶ್ರೀ ಈಶ್ವರ್ ರವರು ಅವರುಗಳ ಹೇಳಿಕೆಗಳನ್ನು ಆಯೋಗದ ಮುಂದೆ ನೀಡಿರುತ್ತಾರೆ. ಡಿವೈ.ಎಸ್.ಪಿ ರವರು ನೀಡಿದ ದಿನಾಂಕ. 06.03.2021ರ ಪತ್ರದ ವರದಿಯ ಬಗ್ಗೆ ಪಿ.ಎಸ್.ಐ ಶ್ರೀ ಕೆ.ಪ್ರದೀಪ್ ಪೂಜಾರಿರವರನ್ನು ಪ್ರಶ್ನಿಸಿದ್ದು, ಮೇಲೆ ಹೇಳಲಾದ ಎಂ.ಎಲ್.ಸಿಗಳು ರಾಜಾನುಕುಂಟೆ ಪೊಲೀಸ್ ಠಾಣೆಗೆ ಬಂದಿರುವುದಿಲ್ಲವೆಂದು ಪಿ.ಎಸ್.ಐ ರವರು ತಿಳಿಸಿರುತ್ತಾರೆ. ಸದರಿ ಎಂ.ಎಲ್.ಸಿಗಳನ್ನು ದೂರುದಾರರಾದ ಶ್ರೀ ಎಸ್.ಎನ್ ಪ್ರದೀಪ್ ರವರಿಗೆ ನೀಡಿರುತ್ತಾರೆ ಎಂದು ಡಿವೈ.ಎಸ್.ಪಿ ರವರ ವರದಿಯಾಗಿರುತ್ತದೆ.

ದಿನಾಂಕ.21.04.2021 ರಂದು ದೂರುದಾರರ ಮಾವ ಶ್ರೀ ಈಶ್ವರ್ ರವರು ಆಯೋಗದ ಮುಂದೆ ನೀಡಿರುವ ಹೇಳಿಕೆಯು ಈ ಕೆಳಕಂಡಂತೆ ಇದೆ:

"ಸಿಂಗನಾಯಕನಹಳ್ಳಿಯಲ್ಲಿನ ಅವರ ಸೈಟ್ ಮಾರಾಟ ಮಾಡುವ ಬಗ್ಗೆ ನಮ್ಮ ಮನೆಗೆ ಹಾಲು ಹಾಕಲು ಬರುತ್ತಿದ್ದ ಶ್ರೀ ನಾಗಭೂಷಣ್ ರವರು ತನ್ನ ಸೈಟನ್ನು ತೆಗೆದುಕೊಳ್ಳುವಂತೆ ಹೇಳುತ್ತಿದ್ದ, ಇದರಿಂದ ಶ್ರೀ ನಾಗಭೂಷಣ್ ರವರ ತಮ್ಮ ಶ್ರೀ ಪ್ರದೀಪ್ ರವರು ಪರಿಚಯವಾಗಿದ್ದು, ಮನೆ ಕಟ್ಟುವ ಸಲುವಾಗಿ ಮತ್ತು ಹಣವನ್ನು ನಿಧಾನವಾಗಿ ನೀಡಲು ಸಮಯ ನೀಡುತ್ತೇವೆ ಎಂದು ಆಗಾಗ್ಗೆ ನಮ್ಮ ಮನೆಗೆ ಶ್ರೀ ಪ್ರದೀಪ್ ಮತ್ತು ಅವನ ತಾಯಿ ಮನೆಗೆ ಬರುತ್ತಿದ್ದರು. ಅವರು ನನ್ನಿಂದ 95 ಲಕ್ಷ ರೂಗಳನ್ನು ತೆಗೆದುಕೊಂಡರು. ನಾನು ಒಂದು ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದು, ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಗೆ ಮನೆಗೆ ವಾಪಸ್ ಬರುತ್ತಿದ್ದೆ. ಈ ಸಮಯವನ್ನು ದುರುಪಯೋಗಪಡಿಸಿಕೊಂಡು ನನ್ನ ಮಗಳನ್ನು ಪ್ರೀತಿಸುವ ನಾಟಕ ಮಾಡಿ ನಂಬಿಸಿರುತ್ತಾನೆ. ತನ್ನ ಸ್ವಂತ ಊರಿನಲ್ಲಿ ಒಂದು ಪ್ರತಿಷ್ಠಿತ ಮನೆಯನ್ನು ಕಟ್ಟಿಕೊಂಡು ಗೌರವದಿಂದ ಬಾಳುತ್ತಿದ್ದೇವೆ ಎಂದು ಹೇಳಿ ನಮ್ಮ ಮನೆಗೆ ಬಂದು ನನ್ನ ಮಗಳನ್ನು ಮದುವೆ ಮಾಡಿಕೊಡುವಂತೆ ಒತ್ತಾಯಿಸಿ,

ಇಲ್ಲ ಸಲ್ಲದ ಆಸೆ ತೋರಿಸಿ ಅವರ ಕಡೆಯಿಂದ ಅವರ ಸಂಬಂಧಿಕರ್‍ಯಾರನ್ನು ಮಾತುಕತೆಗೆ ಕರೆದುಕೊಂಡು ಬರದೇ ಮದುವೆ ಮಾಡಿಕೊಂಡಿರುತ್ತಾನೆ.

ಮದುವೆಯಾದ 3 ತಿಂಗಳ ನಂತರ ಸೈಟನ್ನು ರಿಜಿಸ್ಟರ್ ಮಾಡಿ ಕೊಡುವಂತೆ ಶ್ರೀ ಪ್ರದೀಪ್‌ನ ತಾಯಿಯನ್ನು ನಾನು ಕೇಳುತ್ತಿದ್ದು, ಅವರುಗಳು ಇದು ನಮ್ಮ ಫ್ಯಾಮಿಲಿ ಡಿಸ್‌ಪ್ಯೂಟ್ ಆಗಿ ಜಗಳವಾಗಿದ್ದು, ಕೋರ್ಟ್‌ನಲ್ಲಿ ಕೇಸ್ ನಡೆಯುತ್ತಿದೆ ಎಂದು ಹೇಳಿ ಸೈಟನ್ನು ರಿಜಿಸ್ಟರ್ ಮಾಡಿಕೊಟ್ಟಿರುವುದಿಲ್ಲ. ಈ ಬಗ್ಗೆ ನಾನು ಸೈಟನ್ನು ರಿಜಿಸ್ಟರ್ ಮಾಡಿಕೊಡುವಂತೆ ಒತ್ತಾಯ ಮಾಡುತ್ತಿದ್ದಾಗ, ಮನೆಯಲ್ಲಿ ಪ್ರದೀಪ್ ತನ್ನ ಹೆಂಡತಿ ನವ್ಯಶ್ರೀ ಮೇಲೆ ಜಗಳವಾಡುತ್ತಿದ್ದ. ಈ ಬಗ್ಗೆ ನನ್ನ ಅತ್ತಿಗೆ, ನನ್ನ ಅಣ್ಣನ ಮಕ್ಕಳು ಹಾಗೂ ಪ್ರದೀಪ್‌ನ ಸ್ನೇಹಿತ ಶ್ರೀ ಸಂಪತ್‌ಕುಮಾರ್ ರವರ ಮನೆಯಲ್ಲಿ ನನ್ನ ಮಗಳು ಹಾಗೂ ಪ್ರದೀಪ್ ಇವರಿಬ್ಬರಿಗೂ ಸಮಾಧಾನ ಮಾಡಿ, ಬುದ್ದಿ ಹೇಳಿ ಹೊಂದಾಗಿ ಬಾಳಿಕೊಂಡು ಹೋಗುವಂತೆ ಬುದ್ದಿವಾದ ಹೇಳಲಾಯಿತು.

ಇದಾದ ಕೆಲವು ತಿಂಗಳ ನಂತರ ಏಕಾಏಕಿ ನನ್ನ ಮೊಬೈಲ್ ರಾಜಾನುಕುಂಟೆ ಪೊಲೀಸ್ ಠಾಣೆಯಿಂದ ದೂರವಾಣಿ ಕರೆ ಮಾಡಿ, ನಿಮ್ಮ ಮಗಳ ಮೇಲೆ ನಿಮ್ಮ ಅಳಿಯ ಪ್ರದೀಪ್ ದೂರು ದಾಖಲಿಸಿದ್ದಾನೆ. ಈ ಬಗ್ಗೆ ಮಾತನಾಡಲು ಬನ್ನಿ ಎಂದು ಕರೆದರು. ಆಗ ನಾನು ಇದು ಗಂಡ ಹೆಂಡತಿ ಜಗಳ ಬುದ್ದಿ ಹೇಳಿ ಕಳುಹಿಸಿ ಕೊಡಿ ಎಂದು ನಾನು ಹೇಳಿದೆ. ಪೊಲೀಸರು ಪುನ: ಪುನ: ನನಗೆ ದೂರವಾಣಿ ಕರೆ ಮಾಡಿ ಠಾಣೆಗೆ ಬರುವಂತೆ ಕರೆಯುತ್ತಿದ್ದರು. ಆಗ ನಾನು ಠಾಣೆಗೆ ಹೋದೆ ಬುದ್ದಿ ಹೇಳಿ ಕಳುಹಿಸಿ ಎಂದು ನಾನು ಮನೆಗೆ ಹೋದೆ. ಆದರೆ ಅವರ ಉದ್ದೇಶ ಗಂಡ ಹೆಂಡತಿ ಒಂದು ಮಾಡುವ ಉದ್ದೇಶವಿರಲಿಲ್ಲ. ಯಾವುದಾದರೂ ರೀತಿಯಲ್ಲಿ ಮಗಳನ್ನು ಹೊರ ಹಾಕಿ, ನನ್ನಿಂದ ಹಣ, ಆಸ್ತಿಯನ್ನು ಪಡೆಯುವ ದುರುದ್ದೇಶವಾಗಿತ್ತು.

ಇದಾದ ಕೆಲ ದಿನಗಳು ಆದ ಮೇಲೆ ಏಕಾಏಕಿ ನನ್ನ ಮಗಳು ನನ್ನ ಮನೆಗೆ ಬಂದು ಮನೆಯ ಬಾಗಿಲ ಕೀ ಹಾಕಿ ತೆಗೆದರೆ ಡೋರ್ ಓಪನ್ ಆಗುತ್ತಿಲ್ಲವೆಂದು ಕಣ್ಣೀರು ಹಾಕುತ್ತಾ ತಿಳಿಸಿದಳು. ಆಗ ಬೇರೆ ವಿಧಿಯಿಲ್ಲದೆ ರಾಜಾನುಕುಂಟೆ ಪೊಲೀಸ್ ಠಾಣೆಗೆ ಹೋಗಿ ನಮ್ಮ ಸಮಸ್ಯೆ ಹೇಳಿಕೊಂಡು ನ್ಯಾಯ ಕೊಡಿಸುವಂತೆ ಕೇಳಿಕೊಂಡು ಈ ರೀತಿ ನನ್ನ ಅಳಿಯ ಪ್ರದೀಪ್ ನನ್ನ ಮಗಳಿಗೆ ತೊಂದರೆ ಕೊಡುತ್ತಿದ್ದಾನೆ, ಅವನನ್ನು ಠಾಣೆಗೆ ಕರೆಸಿ ವಿಚಾರಣೆ ಮಾಡಿ ಎಂದು ಹೇಳಿ ಹೊರಟು ಮನೆಗೆ ಬಂದೆ. ನಾನು ಸುಮಾರು 4, 5 ಬಾರಿ ರಾಜಾನುಕುಂಟೆ ಪೊಲೀಸ್ ಠಾಣೆಗೆ ಹೋಗಿ ಪ್ರದೀಪ್ ಹಾಗೂ ಅವರ ತಾಯಿ ಮತ್ತು ಅಣ್ಣನನ್ನು ಕರೆಸಿ ವಿಚಾರಣೆ ಮಾಡಿ ಎಂದು ಹಲವಾರು ಬಾರಿ ಕೇಳಿಕೊಂಡಿರುತ್ತೇನೆ."

ದಿನಾಂಕ.21.04.2021 ರಂದು ದೂರುದಾರರ ಪತ್ನಿ ಶ್ರೀಮತಿ ನವ್ಯಶ್ರೀ ರವರು ಆಯೋಗದ ಮುಂದೆ ನೀಡಿರುವ ಹೇಳಿಕೆಯು ಈ ಕೆಳಕಂಡಂತೆ ಇದೆ:

"ಶ್ರೀ ಪ್ರದೀಪ್ ಈತನು ನನ್ನ ತಂದೆಯವರ ಜೊತೆ ಬಿಸ್‌ನೆಸ್ ಮಾಡಬೇಕೆಂದು ನನ್ನ ತಂದೆಯನ್ನು ಪರಿಚಯ ಮಾಡಿಕೊಂಡಿದ್ದು, ತನ್ನ ಸೈಟ್ ವ್ಯಾಪಾರ ಮಾಡಬೇಕೆಂದು ಬಂದಿದ್ದು, ನನ್ನನ್ನು ಪ್ರೀತಿ ಮಾಡುವ ನಾಟಕವಾಡಿದ್ದು, ಮದುವೆಗೆ ಅವನು ಮತ್ತು ಅವನ ತಾಯಿ ಬಲವಂತ ಮಾಡಿ ನಮ್ಮ ಮಾನ

ಮರ್ಯಾದೆ ಹೋಗುತ್ತದೆ ಎಂದು ಹೇಳಿ ನಂಬಿಸಿ, ನಮ್ಮಿಬ್ಬರ ಮದುವೆಗೆ ನಿನ್ನ ತಂದೆ ತಾಯಿ ಒಪ್ಪದಿದ್ದರೆ ಮನೆ ಬಿಟ್ಟು ಓಡಿ ಬಾ ಎಂದು ಹೆದರಿಸಿ, ಬೆದರಿಸಿ ನನ್ನ ತಂದೆ ತಾಯಿಯನ್ನು ಬಲವಂತವಾಗಿ ಒಪ್ಪಿಸಿ ಮದುವೆ ಮಾಡಿಕೊಂಡಿರುತ್ತಾನೆ.

ಮದುವೆಯಾದ ಕೆಲವೇ ದಿನಗಳಲ್ಲಿ ನನ್ನ ತಂದೆ ಬಳಿ ಒಡವೆ, ವರದಕ್ಷಿಣೆ ಹಾಗೂ ನಿಮ್ಮ ಅರ್ಧ ಆಸ್ತಿಯನ್ನು ತೆಗೆದುಕೊಂಡು ಬಾ ಎಂದು ಬಲವಂತ ಮಾಡುತ್ತಿದ್ದ ಈ ವಿಷಯವಾಗಿ ಯಾವಾಗಲೂ ಜಗಳವಾಗುತ್ತಿತ್ತು, ಹಾಗೂ ಯಾರೊಂದಿಗೆ ಮಾತನಾಡಲು ಬಿಡುತ್ತಿರಲಿಲ್ಲ ಯಾವಾಗಲೂ ಯಾರ ಹತ್ತಿರ ಮಾತನಾಡುತ್ತಿದ್ದರೂ ಅವರ ಮೇಲೆಲ್ಲ ಅನುಮಾನ ಪಡುತ್ತಿದ್ದರು. ಹೀಗೆ ಮನೆಯಲ್ಲಿ ಯಾವಾಗಲೂ ಜಗಳ ಮಾಡುತ್ತಾ ಊಟ, ತಿಂಡಿ ಕೊಡದೆ ಮನೆಯಿಂದಲೂ ಹೊರಬಿಡದೆ ಪದೇ ಪದೇ ಮಾನಸಿಕವಾಗಿ ಹಾಗೂ ದೈಹಿಕವಾಗಿ ಹಿಂಸೆ ನೀಡಿತ್ತಿದ್ದರು. ಹಾಗೂ ದೈಹಿಕವಾಗಿ ನನ್ನ ಮೇಲೆ ಹಲ್ಲೆ ಮಾಡಿ ಕೊಲೆ ಮಾಡಲು ಯತ್ನಿಸಿದಾಗ ನನ್ನ ರಕ್ಷಣೆಗಾಗಿ ಅವನನ್ನು ತಳ್ಳಿದಾಗ, ನನ್ನ ಕೈಬೆರಳಿನ ಉಗುರು ಅವನ ಕತ್ತಿನಲ್ಲಿ ತಾಗಿರುತ್ತದೆ.

ನಂತರ ನನ್ನನ್ನು ಮನೆಯಲ್ಲಿ ಕೂಡಿ ಹಾಕಿ ಪ್ರದೀಪ್, ಅವರ ಅಣ್ಣ ಹಾಗೂ ಅವರ ಅತ್ತಿಗೆ ಜೊತೆಯಲ್ಲಿ ರಾಜಾನುಕುಂಟೆ ಪೊಲೀಸ್ ಠಾಣೆಗೆ ಹೋಗಿ ದೂರು ದಾಖಲಿಸಿರುತ್ತಾರೆ. ನಮ್ಮ ಸಂಸಾರದ ವಿಚಾರದಲ್ಲಿ ರಾಜಾನುಕುಂಟೆ ಪೊಲೀಸ್ ಇನ್ಸ್‌ಪೆಕ್ಟರ್ ಹಾಗೂ ಹಿರಿಯರ ಸಮ್ಮುಖದಲ್ಲಿ ನಮಗೆ ಬುದ್ದಿ ಹೇಳಿ ಹೊಂದಿಕೊಂಡು ಹೋಗುವಂತೆ ಹೇಳಿ ಪುನ: ಮನೆಗೆ ಕಳುಹಿಸಿರುತ್ತಾರೆ. ಪುನ: ಹೀಗೆ ಜಗಳವಾಗುತ್ತಿದ್ದು, ಮಾನಸಿಕ ಹಾಗೂ ದೈಹಿಕವಾಗಿ ಹಿಂಸೆ ಕೊಟ್ಟು ಮನೆಯಿಂದ ಹೊರಗೆ ಹಾಕಿದರು. ದಾರಿ ತೋಚದೆ ನಾನು ಪುನ: ರಾಜಾನುಕುಂಟೆ ಪೊಲೀಸ್ ಠಾಣೆಗೆ ಹೋಗಿ ಪ್ರದೀಪ್ ಮೇಲೆ ದೂರು ದಾಖಲಿಸಿದೆ. ಆಗ ಪೊಲೀಸರು ಪ್ರದೀಪ್ ಮೇಲೆ ಎಫ್.ಐ.ಆರ್ ದಾಖಲಿಸಿರುತ್ತಾರೆ.

ಮುಂದುವರೆದ ಹೇಳಿಕೆ:

ಶ್ರೀಮತಿ ನವ್ಯಶ್ರೀ ರವರನ್ನು ಪ್ರಶ್ನಿಸಿ, ದಿನಾಂಕ.02.11.2018ರಲ್ಲಿ ಶ್ರೀ ಪ್ರದೀಪ್ ರವರು ನಿಮ್ಮ ಮೇಲೆ ದೂರು ದಾಖಲಿಸಿದ ಮೇಲೆ ದಿನಾಂಕ.19.02.2019 ರಂದು ಎಫ್.ಐ.ಆರ್ ದಾಖಲಿಸುವುದಕ್ಕೆ ಕಾರಣವೇನು ಎಂದು ಕೇಳಲಾಗಿ ಅದಕ್ಕೆ ಪ್ರತ್ಯುತ್ತರವಾಗಿ ಶ್ರೀಮತಿ ನವ್ಯಶ್ರಿ ರವರು ದಿನಾಂಕ.02.11.2018 ರಂದು ಶ್ರೀ ಪ್ರದೀಪ್‌ರವರು ನನ್ನ ಮೇಲೆ ರಾಜಾನುಕುಂಟೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ ನಂತರ ಪೊಲೀಸ್ ಅಧಿಕಾರಿಗಳು ಹಾಗೂ ಹಿರಿಯರ ಸಮ್ಮುಖದಲ್ಲಿ ನಮ್ಮಿಬ್ಬರಿಗೆ ಹೊಂದಿಕೊಂಡು ಬಾಳುವಂತೆ ಬುದ್ದಿವಾದ ಹೇಳಿ ಮನೆಗೆ ಕಳುಹಿಸಿಕೊಟ್ಟಿರುತ್ತಾರೆ. ನನ್ನ ಮನಸ್ಥಿತಿ ಸರಿಯಲ್ಲದ ಕಾರಣ ನಾನು ಸ್ವಲ್ಪ ದಿನ ತಾಯಿಯ ಮನೆಯಲ್ಲಿ, ಸ್ವಲ್ಪ ದಿನ ಗಂಡನ ಮನೆಯಲ್ಲಿ ಇರುತ್ತಿದ್ದೆ. ಆದರೆ ಪ್ರದೀಪ್ ರವರಿಂದ ಮಾನಸಿಕ ಹಾಗೂ ದೈಹಿಕ ಹಿಂಸೆ ತಾಳಲಾರದೆ ನಾನು ದಾರಿ ತೋಚದೆ ರಾಜಾನುಕುಂಟೆ ಪೊಲೀಸ್ ಠಾಣೆಗೆ ಹೋಗಿ ದೂರನ್ನು ದಾಖಲಿಸಿದೆ, ಆಗ ಠಾಣೆಯಲ್ಲಿ ವರದಕ್ಷಿಣೆ ದೂರು ದಾಖಲಾಗಿರುತ್ತದೆ."

ದೂರು, ವರದಿಗಳು, ಹೇಳಿಕೆಗಳು ಹಾಗೂ ಪ್ರಕರಣಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸಲಾಗಿ, ಇವುಗಳಿಂದ ತಿಳಿದುಬಂದ ಅಂಶವೇನೆಂದರೆ ದೂರುದಾರರಾದ ಶ್ರೀ ಎಸ್.ಎನ್ ಪ್ರದೀಪ್ ಹಾಗೂ ಅವರ ಮಾವ ಶ್ರೀ ಈಶ್ವರ್ ರವರ ಮದ್ಯದಲ್ಲಿ ಹಣಕಾಸಿನ ವ್ಯವಹಾರದ ಬಗ್ಗೆ

ಗಲಾಟೆಯಿದ್ದು, ಇದು ಸಿವಿಲ್ ಸ್ವರೂಪದ ವ್ಯಾಜ್ಯವಾಗಿದ್ದು, ಈಗಾಗಲೇ ಘನ ನ್ಯಾಯಾಲಯದಲ್ಲಿರುವುದರಿಂದ, ಆಯೋಗದ ನಿಯಮಾವಳಿ 9(h) ರನ್ವಯ ಪ್ರಕರಣವು ಆಯೋಗದ ಕಾರ್ಯವ್ಯಾಪ್ತಿಗೆ ಒಳಪಡುವುದಿಲ್ಲ.

ಮುಂದುವರೆದು, ದೂರರ್ಜಿಯಲ್ಲಿ ರಾಜಾನುಕುಂಟೆ ಪೊಲೀಸ್ ಠಾಣೆಗೆ ಶ್ರೀ ಎಸ್.ಎನ್ ಪ್ರದೀಪ್ ರವರನ್ನು ಪಿ.ಎಸ್.ಐ ಶ್ರೀ ಕೆ.ಪ್ರದೀಪ್ ಪೂಜಾರಿ ರವರು ಪದೆ ಪದೇ ಆಸ್ತಿ ವಿಚಾರವಾಗಿ ಕರೆಸಿ, ದೂರುದಾರರಿಗೆ ಹೊಡೆದಿದ್ದು, ರೂ.5 ಲಕ್ಷ ಹಣ ಕೊಡುವಂತೆ ಶ್ರೀ ಪ್ರವೀಣ್ ಮೂಲಕ ಬೇಡಿಕೆ ಇಟ್ಟಿದ್ದು, ಈ ಬಗ್ಗೆ ಫೋನ್‌ನಲ್ಲಿ ರೆಕಾರ್ಡ್ ಮಾಡಿರುವ ಸಂದೇಶವನ್ನು ಸಿ.ಡಿ ಮೂಲಕ ಆಯೋಗಕ್ಕೆ ಹಾಜರುಪಡಿಸಿದ್ದೇನೆಂದು ತಿಳಿಸಿದ್ದು, ಈ ಬಗ್ಗೆ ಪಿ.ಎಸ್.ಐ ಶ್ರೀ ಕೆ.ಪ್ರದೀಪ್ ಪೂಜಾರಿ ರವರು ಫೋನ್‌ನಲ್ಲಿ ರೆಕಾರ್ಡ್ ಆಗಿರುವ ಧ್ವನಿಯು ನನ್ನದಲ್ಲವೆಂದು, ಆಸ್ತಿ ವಿಚಾರವಾಗಿ ಪೊಲೀಸ್ ಠಾಣೆಗೆ ದೂರುದಾರರನ್ನು ಕರೆಸಿರುವುದಿಲ್ಲವೆಂದು ಹಾಗೂ ಯಾವುದೇ ರೀತಿಯಲ್ಲಿ ದೂರುದಾರರಿಗೆ ರೂ.5 ಲಕ್ಷ ಹಣ ಬೇಡಿಕೆ ಇಟ್ಟಿರುವುದಿಲ್ಲವೆಂದು ಹೇಳಿರುತ್ತಾರೆ. ದೂರುದಾರರು ಹಾಗೂ ಅವರ ಪತ್ನಿ ನವ್ಯಶ್ರೀ ರವರುಗಳು ಪ್ರತ್ಯೇಕವಾಗಿ ರಾಜಾನುಕುಂಟೆ ಪೊಲೀಸ್ ಠಾಣೆಗೆ ಬಂದಿದ್ದು, ದೂರುದಾರರು ತಮ್ಮಿಬ್ಬರ ಮಧ್ಯೆ ಇದ್ದ ಜಗಳವನ್ನು ಬಗೆಹರಿಸಿಕೊಡುವಂತೆ ಪದೆ ಪದೇ ಪೊಲೀಸ್ ಠಾಣೆಗೆ ಬಂದು ಮೌಖಿಕವಾಗಿ ಮನವಿ ಮಾಡಿಕೊಂಡಿದ್ದು, ಅದೇ ರೀತಿಯಾಗಿ ಶ್ರೀಮತಿ ನವ್ಯಶ್ರೀ ರವರು ತನ್ನ ಗಂಡ ಹಾಗೂ ಆತನ ಮನೆಯವರು ಕಿರುಕುಳ ಕೊಡುತ್ತಿದ್ದು, ನಮ್ಮಿಬ್ಬರ ಮಧ್ಯದಲ್ಲಿರುವ ಕಲಹವನ್ನು ಬಗೆಹರಿಸಿಕೊಡುವಂತೆ ಮೌಖಿಕವಾಗಿ ಪದೆ ಪದೇ ಪೊಲೀಸ್ ಠಾಣೆಗೆ ಬರುತ್ತಿದ್ದು, ಈ ಬಗ್ಗೆ ಪಿ.ಎಸ್.ಐ ಶ್ರೀ ಪ್ರದೀಪ್ ಪೂಜಾರಿ ರವರು ನೀವುಗಳು ಲಿಖಿತವಾಗಿ ದೂರು ನೀಡುವಂತೆ ಕೇಳಿಕೊಂಡಿರುತ್ತಾರೆ. ಆದರೆ ದೂರುದಾರರು ಅಥವಾ ಶ್ರೀಮತಿ ನವ್ಯಶ್ರೀ ರವರು ಯಾವುದೇ ಲಿಖಿತ ದೂರುಗಳನ್ನು ನೀಡದೇ ಇದ್ದು, ದಿನಾಂಕ.19.02.2019 ರಂದು ಶ್ರೀಮತಿ ನವ್ಯಶ್ರೀ ರವರು ಲಿಖಿತ ದೂರಿನ ಮೇರೆಗೆ ಮೊ.ಸಂಖ್ಯೆ.20/2019 ರಂತೆ ದೂರುದಾರರು ಹಾಗೂ ಆತನ ಮನೆಯವರ ಮೇಲೆ ಪ್ರಕರಣ ದಾಖಲಾಗಿರುತ್ತದೆ.

ಹಾಗೂ ದೂರುದಾರರು ಹೇಳಿರುವ ಪ್ರಕಾರ ಶ್ರೀ ಪ್ರವೀಣ್ ಮೂಲಕ ಪಿ.ಎಸ್.ಐ ಶ್ರೀ ಎಸ್.ಎನ್ ಪ್ರದೀಪ್ ಪೂಜಾರಿಯವರು ರೂ.5 ಲಕ್ಷ ಹಣ ಬೇಡಿಕೆ ಇಟ್ಟಿರುವ ಬಗ್ಗೆ ವಿಚಾರಣಾ ಕಾಲದಲ್ಲಿ ಯಾವುದೇ ಪೂರಕ ಸಾಕ್ಷ್ಯಾಧಾರಗಳು ಕಂಡು ಬಾರದೇ ಇರುವುದರಿಂದ, ಪಿ.ಎಸ್.ಐ ಶ್ರೀ ಎಸ್.ಎನ್ ಪ್ರದೀಪ್ ಪೂಜಾರಿಯವರು ಬೇಡಿಕೆ ಇಟ್ಟಿರುವ ಬಗ್ಗೆ ಅವರ ಪಾತ್ರ ಕಂಡು ಬಂದಿರುವುದಿಲ್ಲವೆಂಬ ಅಂಶ ಕಂಡು ಬಂದಿರುತ್ತದೆ.

ದೂರುದಾರರು ಅವರ ದೂರರ್ಜಿ ಹಾಗೂ ಹೇಳಿಕೆಯಲ್ಲಿ ಹೇಳಿರುವಂತೆ ಪಿ.ಎಸ್.ಐ ಶ್ರೀ ಕೆ.ಪ್ರದೀಪ್ ಪೂಜಾರಿ ರವರು ದೂರುದಾರರ ಮಾವ ಹಾಗೂ ಹೆಂಡತಿ ಶ್ರೀಮತಿ ನವ್ಯಶ್ರೀ ರವರುಗಳು ಸಮಕ್ಷಮದಲ್ಲಿ ದೂರುದಾರರಿಗೆ ಥಳಿಸಿರುವ ಬಗ್ಗೆ ಪಿ.ಎಸ್.ಐ ಶ್ರೀ ಕೆ.ಪ್ರದೀಪ್ ಪೂಜಾರಿ ರವರು ತಾನು ಹೊಡೆದಿರುವುದಿಲ್ಲವೆಂದು ಹೇಳಿರುತ್ತಾರೆ.

ಮುಂದುವರೆದು, ದೂರುದಾರರ ಪತ್ನಿಯಾದ ಶ್ರೀಮತಿ ನವ್ಯಶ್ರೀ ರವರು ದೂರುದಾರರ ಮೇಲೆ ಹಲ್ಲೆ ಮಾಡಿರುವ ಬಗ್ಗೆ ಹಾಗೂ ಪೊಲೀಸ್ ಅಧಿಕಾರಿಯು ದೂರುದಾರರಾದ ಶ್ರೀ ಎಸ್.ಎನ್ ಪ್ರದೀಪ್ ರವರ ಮೇಲೆ ಹಲ್ಲೆ ಮಾಡಿರುವ ಬಗ್ಗೆ ಎರಡು ಎಂ.ಎಲ್.ಸಿಗಳನ್ನು ದೂರುದಾರರಿಗೆ ಸ್ವತ: ಯಲಹಂಕ ಸರ್ಕಾರಿ ಆಸ್ಪತ್ರೆಯವರೇ ನೀಡಿರುತ್ತಾರೆ. ಈ ಎರಡೂ ಎಂ.ಎಲ್.ಸಿಗಳನ್ನು ಶ್ರೀ ಎಸ್.ಎನ್ ಪ್ರದೀಪ್ ರವರು ರಾಜಾನುಕುಂಟೆ ಪೊಲೀಸ್ ಠಾಣೆಯಲ್ಲಿ ನೀಡಲು ಹೋದಾಗ ಪೊಲೀಸರು ಸ್ವೀಕರಿಸಲು ನಿರಾಕರಿಸುತ್ತಾರೆಂದು ಹೇಳಿರುತ್ತಾರೆ, ಅದಕ್ಕೆ ಪಿ.ಎಸ್.ಐ ಶ್ರೀ ಪ್ರದೀಪ್ ಪೂಜಾರಿರವರು ನಮ್ಮ ಠಾಣೆಗೆ ದೂರುದಾರರು ಹೇಳಿರುವ ಪ್ರಕಾರ ಯಾವುದೇ ಎಂ.ಎಲ್.ಸಿಗಳನ್ನು ಹಾಜರುಪಡಿಸಿರುವುದಿಲ್ಲವೆಂದು ಹಾಗೂ ಯಲಹಂಕದ ಸರ್ಕಾರಿ ಆಸ್ಪತ್ರೆಯಿಂದ ಯಾವುದೇ ಎಂ.ಎಲ್.ಸಿಗಳು ಬಂದಿರುವುದಿಲ್ಲವೆಂದು ಹೇಳಿರುತ್ತಾರೆ. ಸದರಿ ಎರಡು ಎಂ.ಎಲ್.ಸಿ ಗಳು ರಾಜಾನುಕುಂಟೆ ಪೊಲೀಸ್ ಠಾಣೆಗೆ ತಲುಪದಿದ್ದ ಕಾರಣ, ರಾಜಾನುಕುಂಟೆ ಪೊಲೀಸರು ಯಾವುದೇ ಕ್ರಮ ಜರುಗಿಸಲು ಸಾಧ್ಯವಾಗದೇ ಇರುವುದು ವಿಚಾರಣಾ ಕಾಲದಲ್ಲಿ ಕಂಡು ಬರುತ್ತದೆ.

ಆದುದರಿಂದ ದೂರರ್ಜಿಗೆ ಸಂಬಂಧಿಸಿದಂತೆ ಯಾವುದೇ ಸಾಕ್ಷ್ಯಾಧಾರಗಳು ಹಾಗೂ ಪುರಾವೆಗಳು ಕಂಡು ಬಾರದ ಕಾರಣ, ಹಾಗೂ ಪ್ರಕರಣದ ವಿಚಾರವು ದೂರುದಾರರು ಹಾಗೂ ಎದುರುದಾರರ ಮಧ್ಯೆ ಘನ ನ್ಯಾಯಾಲಯದಲ್ಲಿರುವುದರಿಂದ ಆಯೋಗದ ನಿಯಮಾವಳಿ 9(h) ರನ್ವಯ ಪ್ರಕರಣವು ಆಯೋಗದ ಕಾರ್ಯವ್ಯಾಪ್ತಿಗೆ ಒಳಪಡದೇ ಇರುವುದು. ಮುಂದುವರೆದು ಪಿ.ಎಸ್.ಐ ಶ್ರೀ ಕೆ.ಪ್ರದೀಪ್ ಪೂಜಾರಿ ರವರು ದೂರುದಾರರ ಮೇಲೆ ಹಲ್ಲೆ ಮಾಡಲಾಗಿರುವ ಆರೋಪದ ಬಗ್ಗೆ ಡಿ.ಜಿ & ಐ.ಜಿ.ಪಿ, ಕರ್ನಾಟಕ ಸರ್ಕಾರ ರವರು ಪಿ.ಎಸ್.ಐ ಶ್ರೀ ಕೆ.ಪ್ರದೀಪ್ ಪೂಜಾರಿ ರವರು ದೂರುದಾರರ ಮೇಲೆ ಹಲ್ಲೆ ಮಾಡಿರುವುದು ಕಂಡು ಬಂದಲ್ಲಿ ಅವರ ಮೇಲೆ ಸೂಕ್ತ ಕ್ರಮ ಜರುಗಿಸಬೇಕಾಗಿ ಸೂಚಿಸಿ, ಪ್ರಕರಣವನ್ನು ಮುಕ್ತಾಯಗೊಳಿಸಲಾಗಿದೆ.

Sd/-
(ಆರ್.ಕೆ ದತ್ತ)
ಸದಸ್ಯರು

ಜಿ.ಎಸ್.